# 31

# ಕಳೆದು ಹೋಗಿದ್ದ ಉತ್ತಮ ಮನುಷ್ಯನು

## (10:24-48; 11:12-18)

ಅಪೊಸ್ತಲರ ಕೃತ್ಯಗಳ 10ನೇ ಕೊರ್ನೇಲ್ಯನ ಹಾಗೂ ಅವನ ಮನೆಯವರ ಪರಿವರ್ತನೆಯ ವಿಷಯವನ್ನು ನೋಡಿದೆವು. ಆ ವಿಷಯದ ವಿಸ್ತರಣೆಯಲ್ಲಿ ಅದರ ಪ್ರಾಮುಖ್ಯತೆಯನ್ನು ತಿಳಿಯುತ್ತೇವೆ (ಇತರೆ ಪರಿವರ್ತನೆಗಳಿಗಿಂತಲೂ ಹೆಚ್ಚಾಗಿ[1]), ಮತ್ತು ಈ ಕಥೆಯನ್ನು ಎರಡು ಸಾರಿ ಪುನಃ ಪುನಃ ಹೇಳಲಾಗಿದೆ.[2]

ಅತ್ಯಂತ ಆಶ್ಚರ್ಯದಾಯಕವಾದದ್ದೇನೆಂದರೆ ಇದು ಒಬ್ಬ ನೀತಿವಂತನ ಪರಿವರ್ತನೆಯ ವಿಷಯ! ದಿವಂಗತ N. B. ಹಾರ್ಡ್‌ಮನ್‌ರವರು ಈ ಕುರಿತು, "ಕೊರ್ನೇಲ್ಯನು ನಮ್ಮನ್ನು ನಾಚಿಸುವನು'' ಎಂಬ ಪ್ರಸ್ತಾಪದ ಸಂದೇಶವನ್ನು ಹೊಂದಿದ್ದರು. ಕೊರ್ನೇಲ್ಯನು ಪರಿವರ್ತನೆಗೊಳ್ಳುವ ಮೊದಲೇ ನಮ್ಮೆಲ್ಲರಿಗಿಂತಲೂ ಉತ್ತಮನಾಗಿದ್ದನು ಎಂದು ತಿಳಿಸಿರುವರು! ಸಿ. ಬ್ರೂಸ್ ವೈಟ್‌ರವರು ಈ ವಿಷಯದ ಕುರಿತು ಐದು ವಿಚಾರಗಳನ್ನು ತಿಳಿಸಿರುವರು:[3] (1) *ಅವನು ಶಿಸ್ತಿನ ಶಿಷ್ಯನಾಗಿದ್ದನು,* ಅವನು "ಒಪ್ಪಿಸಲ್ಪಟ್ಟನು'' ಮತ್ತು ನೀತಿವಂತನು, ದೇವ - ಭಯವುಳ್ಳವನು ಹಾಗೂ ಮೋಸದ ಪ್ರಪಂಚದಲ್ಲಿ ಯಥಾರ್ಥವಾ ಗಿದ್ದವನೂ ಆಗಿದ್ದನು.[4] (2) *ಅವನು ನಂಬಿಗಸ್ತನಾದ ತಂದೆಯಾಗಿದ್ದನು.* ಅವನು ತನ್ನ ಮನೆಯವರಿಗೆಲ್ಲಾ ಬೋಧನೆ ಮಾಡಿದ್ದನು; ಅವರೆಲ್ಲರೂ ಸತ್ಯದೇವರಲ್ಲಿ ನಂಬಿಕೆ ಇಟ್ಟಿದ್ದರು (ಯೆಹೋಶುವ 24:15; ಎಫೆಸ 6:4 ಗಮನಿಸಿ). (3) *ಅವನು ಉದಾರಿಯಾದ ಅನ್ಯನಾಗಿದ್ದನು.* ಅವನು ದಾನ ಧರ್ಮಗಳನ್ನು (ಕಾಣಿಕೆ) ಮಾಡುತ್ತಿದ್ದನು.[5] (4) *ಅವನು ಪ್ರಾರ್ಥಿಸುವ ಉದ್ದೇಶ ಹೊಂದಿದ್ದನು.* ಎಡಬಿಡದೆ ಪ್ರಾರ್ಥಿಸುತ್ತಿದ್ದನು. ಅದು ಗುರುತರವಾದದ್ದೆ. (5) *ರೋಮಾಯರಲ್ಲಿ ಗೌರವಕ್ಕೆ ಪಾತ್ರನಾಗಿದ್ದನು.* ಯೆಹೋದ್ಯರಲ್ಲಿ ವರ್ಚಸ್ಸನ್ನು ಹೊಂದಿದ್ದನು.[6] ಸಾಮಾನ್ಯವಾದ ನಿಯಮದಂತೆ ಯೆಹೊದ್ಯರು ರೋಮಾ ಸೈನಿಕರನ್ನು ದ್ವೇಶಿಸುತ್ತಿದ್ದರು, ಆದರೆ ಭಕ್ತಿಯುಳ್ಳ ಕೊರ್ನೇಲ್ಯನ[7] ವಿಷಯದಲ್ಲಿ ಅವರು ವ್ಯತ್ಯಾಸಭಾವವನ್ನು ಹೊಂದಿದ್ದರು, ಇತರೆ ಸದ್ಗುಣ ಗಳಾದ (*ದೀನ ಕೇಳುಗನು*) ಎಂಬುದನ್ನು ಸೇರಿಸಬಹುದು. ಅವನು ಪ್ರಭಾವದ ಪ್ರಮುಖ ವ್ಯಕ್ತಿಯಾಗಿದ್ದನು ಇದರಲ್ಲಿ ಯಾವುದೇ ಸಂದೇಹವಿಲ್ಲ.

ಆದಾಗ್ಯೂ, ಕೊರ್ನೇಲ್ಯನು ಕಳೆದು ಹೋದ ವ್ಯಕ್ತಿಯಾಗಿದ್ದನು. ಪೇತ್ರನನ್ನು ಕರೆಕಳುಹಿಸುವದಕ್ಕೆ ದೇವ ದೂತನು ತಿಳಿಸಿದನು, "ಅವನು ನಿನಗೆ ಕೆಲವು ಮಾತುಗಳನ್ನು ಹೇಳುವನು, ಆ ಮಾತುಗಳಿಂದ ನಿನಗೂ ನಿನ್ನ ಮನೆಯವರೆಲ್ಲರಿಗೂ *ರಕ್ಷಣೆ*ಯಾಗುವದು ಎಂದು ಹೇಳಿದನು'' (11:14; ಒತ್ತಿ ಹೇಳಿದ್ದು ನನ್ನದು). ಒಬ್ಬನು ಸ್ವನೀತಿಯಿಂದ ರಕ್ಷಿಸಲ್ಪಡಲಾರನು ಎಂಬುದಕ್ಕೆ ಕೊರ್ನೇಲ್ಯನು ಪ್ರಮುಖವಾದ ಉದಾಹರಣೆಯಾಗಿರುವನು, ಅತಿ ಭಯಭಕ್ತಿಯುಳ್ಳ ಮನುಷ್ಯನಿಗೂ, ರಕ್ಷಣೆಯ ಅಗತ್ಯತೆಯಿದೆ (ರೋಮಾಪುರ 3:23; 6:23)! ದೇವರಿಗೂ ಮತ್ತು ಆತನ ಯೋಗ್ಯತೆಗೂ ನಮ್ಮನ್ನು ಹೋಲಿಸಿಕೊಂಡರೆ, "ನಮ್ಮ ನೀತಿಯು ಹರಕು ಬಟ್ಟೆಯಂತಿದೆ'' (ಯೆಶಾಯ 64:6). ಕ್ರಿಸ್ತನ ರಕ್ತದ ಹೊರತು ರಕ್ಷಣೆಯಿಲ್ಲ (ಇಬ್ರಿಯ 9:22)! ಕೊರ್ನೇಲ್ಯನಿಗೂ ಮತ್ತು ಅವನ ಮನೆಯವರಿಗೂ ಕ್ರಿಸ್ತನ ರಕ್ತದ ಅಗತ್ಯತೆ ಇತ್ತು - ಅದರಂತೆ ನಮಗೂ ಅಗತ್ಯತೆ ಇದೆ.

ಆದ್ದರಿಂದ ಈಗ ಆ ನೀತಿವಂತ ಮನುಷ್ಯನ ಪರಿವರ್ತನೆಯ ಕುರಿತು ನಮ್ಮ ಅಧ್ಯಾಯನವನ್ನು ಮುಂದುವರಿಸೋಣ. ಅಡ್ಡಿಗಳನ್ನು ಮುರಿದು ಹಾಕುವದು ಕಠಿಣವಾದದ್ದೇ

ಎಂದು ಹಿಂದಿನ ಪಾಠದಲ್ಲಿ ಗಮನಿಸಿದ್ದೇವೆ. ಯೆಹೂದ್ಯರನ್ನೂ ಹಾಗೂ ಅನ್ಯರನ್ನೂ ಒಗ್ಗೂಡಿಸಲು ದೇವರು ತೆಗೆದುಕೊಂಡ ವಿವಿಧವಾದ ಹೆಜ್ಜೆಗಳನ್ನು ಗಮನಿಸಿದ್ದೇವೆ. ಅಪೊಸ್ತಲರ ಕೃತ್ಯದ ಈ ಪರಿವರ್ತನೆಯಲ್ಲಿ ಇತರೆ ಪರಿವರ್ತನೆಗಳಲ್ಲಿರದ ಅದ್ಭುತಗಳನ್ನು ನೋಡುತ್ತೇವೆ. ಇದರ ಪರಿಣಾಮವಾಗಿ, ಈ ಪರಿವರ್ತನೆಯಲ್ಲಿ ಬಹಳಷ್ಟು ಅಪಾರ್ಥವನ್ನು ಗಮನಿಸುತ್ತೇವೆ. ಸಾಧಾರಣವಾದ ಅನೇಕ ಪ್ರಶ್ನೆಗಳಿಗೆ ಈ ಅಧ್ಯಾಯನದಲ್ಲಿ ಉತ್ತರಿಸಲಾಗಿದೆ.

## ಉತ್ತಮನಾದ ಮನುಷ್ಯನು ಪ್ರಸಂಗಿಗಾಗಿ ಕಾಯುತ್ತಿದ್ದನು (10:24-27)

ಹಿಂದಿನ ಪಾಠದ ಅಂತ್ಯದಲ್ಲಿ, ಪೇತ್ರ 6 ಜನ ಯೆಹೂದ್ಯ ಕ್ರೆಸ್ತರು 3 ಜನ ಕೊರ್ನೇಲ್ಯನ ಜನರು ಒಟ್ಟು 10 ಜನರು. ಯೊಪ್ಪದಿಂದ ಉತ್ತರ ದಿಕ್ಕಿಗೆ ಪ್ರಯಾಣಿಸಿದರೆಂದು ಗಮನಿಸಿದೆವು. ಅವರು ರಾತ್ರಿಯನ್ನು ರಸ್ತೆಯಲ್ಲಿಯೇ ಕಳೆದು ನಂತರ, ಮರುದಿನ [ಅವರು] "ಕೈಸರೈಯನ್ನು ತಲುಪಿದರು" (10:24ಎ).

ದೇವದೂತರ ಮಾತಿನ ಮೇರೆಗೆ ಕೊರ್ನೇಲ್ಯನನು ತನ್ನ ಜನರನ್ನು ಪೇತ್ರನ ಬಳಿಗೆ ಕಳುಹಿಸಿದ್ದರಿಂದ, ಅಪೊಸ್ತಲನು ಖಂಡಿತವಾಗಿಯೂ ಬರುವನೆಂದು ಆ ಶತಾಧಿಪತಿಯು ದೃಢವಾಗಿ ನಂಬಿದ್ದನು. "ಕೊರ್ನೇಲ್ಯನು ತನ್ನ ಬಂಧು ಬಳಗದವರನ್ನು ಪ್ರಾಣಮಿತ್ರರನ್ನು ಕೂಡ ಕರೆಸಿ ಪೇತ್ರನನ್ನು ಎದುರುನೋಡುತ್ತಿದ್ದನು" (ವಚನ 24ಬಿ). ಕೊರ್ನೇಲ್ಯನು ಅವರ ಪ್ರಯಾಣದ ಅವಧಿಯನ್ನು ತಿಳಿದವನಾಗಿ ಹೆಚ್ಚು ಕಡಿಮೆ ಒಂದು ನಿಗಧಿತವಾದ ಸಮಯಕ್ಕೆ ತನ್ನ ಸ್ನೇಹಿತರನ್ನು ಆಹ್ವಾನಿಸಿದ್ದನ್ನು, ಅಥವಾ ಪೇತ್ರನೊಂದಿಗೆ ಬರುತ್ತಿದ್ದ ಅವನ ಸೇವಕರಲ್ಲಿ ಒಬ್ಬನು ಮುಂದಾಗಿ ಬಂದು,[8] ಕೊರ್ನೇಲ್ಯನ ಮನೆಯವರೆಲ್ಲರೂ ಒಟ್ಟಾಗಿ ಸೇರಿಬರಲು ಸಮಯವನ್ನು ತಿಳಿಸಿರಬಹುದೇ?[9] ಇದನ್ನು ನಾವು ಅರಿಯೆವು, ಹೇಗೂ ಅವನ ಸ್ನೇಹಿತರು ಹಾಗೂ ಅವನ ಮನೆಯವರು ಕೊರ್ನೇಲ್ಯನ ಮಾತಿಗೆ ಒಪ್ಪಿದವರಾಗಿ ಒಟ್ಟಾಗಿ ಸೇರಿ ಬಂದ ಂತಹ ವಿಷಯವು *ಕೊರ್ನೇಲ್ಯಯನ ವರ್ಚಸ್ಸಿಗೆ ಸೂಚನೆಯಾಗಿದೆ.*

ಕೊರ್ನೇಲ್ಯನು ಅಪೊಸ್ತಲನನ್ನು ಸಂಧಿಸಲು ಹೊರಗೆ ಹೋಗದೆ ಮನೆಯ ಒಳಗಡೆ ಕಾಯುತ್ತಿದ್ದನು, ಯೆಹೂದ್ಯನಾದ, ಪೇತ್ರನು ಅವನ ಮನೆಯ ಒಳಗಡೆ ಬರಬಹುದೇ ಎಂಬ ಸಂಶಯದಲ್ಲಿ ಇದ್ದನು. ಅನ್ಯರ ಮನೆಯೊಳಗೆ ಹೋಗುವಂತದ್ದು ಯೆಹೂದ್ಯರ ಪರಂಪರೆಯಲ್ಲಿ ಅಶುದ್ಧವಾದ ಕಾರ್ಯವಾಗಿತ್ತು (ವಚನ 28; ಹೋಲಿಸು ಯೋಹಾನ 18:28). ಹೇಗೂ, ಪೇತ್ರನು ಪ್ರಸಂಗಿಸುವದಕ್ಕಾಗಿ ಇಷ್ಟು ದೂರ ಬಂದಿದ್ದನು. ಪೇತ್ರನು ಅವನ ಮನೆಯ ಬಾಗಿಲಿಗೆ ಬರುವದರ ಮೂಲಕವಾಗಿ ಯೆಹೂದ್ಯರ ಸಂಪ್ರದಾಯದ ಗೋಡೆಯನ್ನು ಕೆಡವಿಹಾಕಿದನು.

ಪೇತ್ರನು ಅವನ ಮನೆಯೊಳಗೆ ಹೋದಾಗ ಕೊರ್ನೇಲ್ಯನು ಸಂತೋಷವುಳ್ಳವನಾದನು. ಅವನು ಅಪೊಸ್ತಲನನ್ನು ಸಂಧಿಸಲು ಮುಂದಾಗಿ "ಅವನ ಪಾದಕ್ಕೆ ಬಿದ್ದು," ನಮಸ್ಕಾರ ಮಾಡಿದನು (ವಚನ 25).[10] "ಆರಾಧನೆ" ಎಂಬ ಗ್ರೀಕ್ ತರ್ಜುಮೆಯು "ಸೃಷ್ಟಿಗಾಗಲಿ, ಸೃಷ್ಟಿಕರ್ತನಿಗಾಗಲಿ ನೀಡುವ ಗೌರವಕ್ಕೆ ಸೂಚನೆಯಾಗಿದೆ."[11] ಪೇತ್ರನು ದೇವರ ಸಂದೇಶಕನು ಎಂದು ಅರಿತು, ಕೊರ್ನೇಲ್ಯನು ಅವನನ್ನು ಸನ್ಮಾನಿಸಿದ್ದನು. ಅದು ಅದ್ಭುತವಾದ ದೃಶ್ಯವಾಗಿತ್ತು. ಒಬ್ಬ ರೋಮಾ ಸಿಪಾಯಿಯು ಯಹೂದ್ಯನಿಗೆ ಅಡ್ಡ ಬೀಳುವಂತದ್ದು, ಜಯ ಹೊಂದಿದವನು ಸೋತವನಿಗೆ ಶರಣಾದಂತ ಸೂಚನೆಯಾಗಿರುತ್ತದೆ.[12] ಅಲ್ಲಿದ್ದಂತ ಅಡ್ಡಗೋಡೆಗಳು ನಡುಗುವದಕ್ಕೆ ಆರಂಭಿಸಿದವು!

ಶತಾಧಿಪತಿಯ ಮನೋಭಾವವು ಏನೇ ಆಗಿದ್ದರೂ, ಪೇತ್ರನು ಯಾವುದೇ ವಿಧದ ತಪ್ಪಾದ ಸೂಚನೆಯನ್ನು ಅಲ್ಲಿ ನೀಡಿರಲಿಲ್ಲ.[13] ಆರಾಧನೆಗೆ ದೇವರು ಮಾತ್ರ ಯೋಗ್ಯನು! (ಮತ್ತಾಯ 4:10; 1 ಕೊರಿಂಥ 8:4, 6), ಆದರೆ ತಕ್ಷಣವೇ ಪೇತ್ರನು, "ಏಳಪ್ಪ, ನಾನೂ ಮನುಷ್ಯನು ಎಂದು ಹೇಳಿ ಅವನನ್ನು ಎತ್ತಿದ್ದನು" (ವಚನ 26). ಪೇತ್ರನ ಉತ್ತರಾಧಿಕಾರಿಯಾಗ ಬಯಸುವವರಿಗೆ, ಮನುಷ್ಯರು ತಮಗೆ ಅಡ್ಡಬೀಳಬೇಕೆಂದು ಭಾವಿಸುವವರಿಗೆ, ಮತ್ತು

ತಮ್ಮ ಉಂಗುರ ಧರಿಸಿರುವ ಬೆರಳಿಗೆ ಮುತ್ತನ್ನು ಕೊಡ ಬಯಸುವವರಿಗೆ ಎಂತಹ ಮಾದರಿಯಾಗಿದೆ.[14] ಒಬ್ಬ ಸಹೋದರರು ಈ ವಿಷಯದ ಕುರಿತು ಬರೆದು:

> ಸಹೋದರ W. B. ವೇಸ್ಟ್ ಮೆರ್‌ಮ್ ಪೀಸನ ಧಾರ್ಮಿಕ ಹಾರ್ಡಿಂಗ್ ಶಾಲೆಯ ಡೀನ ಆಗಿದ್ದವರು "ಹೋಲಿ ಫಾದರ್ಸ್" (ಪರಿಶುದ್ಧ ತಂದೆಗಳು ಅವರೊಂದಿಗೆ ಇತರ ನೂರು ಜನರು) ಅವರೊಂದಿಗೆ ಮಾತನಾಡುತ್ತಾ ಪೋಪರವರು ಕೊಠಡಿಯೊಳಕ್ಕೆ ಬಂದಾಗ, ಪ್ರತಿಯೊಬ್ಬರು ಅವರ ಮುಂದೆ ಮೊಣಕಾಲೂರಿ ಅವರು ಸಹ ಪೇತ್ರನು ಕೊರ್ನೇಲ್ಯನಿಗೆ ತಿಳಸಿದ ಮಾತನ್ನು ನೆನಪುಮಾಡಿಕೊಂಡರು. ನಂತರ ಆ ಸಂದರ್ಭವು ಹೆಮ್ಮೆಯೆಂದು ತಿಳಿಯದೆ, ಅವರು ಮೊಣಕಾಲೂರಲಿಲ್ಲ.[15]

ಪೇತ್ರನು ಶತಾಧಿಪತಿಯ ಸಂಗಡ ಸಂಭಾಷಣೆ ಮಾಡುತ್ತಾ ಮನೆಯೊಳಗೆ ಬಂದನು, ಅಲ್ಲಿ ಸಮಾನತೆಯು ಎದ್ದು ಕಾಣುತ್ತಿತ್ತು (ವಚನ 27ಎ). ಅಲ್ಲಿ ಬಹು ಜನರು ಕೂಡಿ ಬಂದಿರುವದನ್ನು ಹಾಗೂ ಅವರು ಕಾಯುತ್ತಿದ್ದದ್ದನ್ನು ಅಪೊಸ್ತಲನು ನೋಡಿ ಆಶ್ಚರ್ಯಪಟ್ಟನು. ಬಹುಶಃ ಅವನು ಕೇವಲ ಕೊರ್ನೇಲ್ಯನ ಕುಟುಂಬದ ಸಮೀಪಸ್ಥರು ಮತ್ತು ಅವನ ಮನೆಯ ಸೇವಕರನ್ನು ಮಾತ್ರ ನಿರೀಕ್ಷಿಸಿದ್ದನು. ಅದರ ಬದಲಾಗಿ, ಅಲ್ಲಿ "*ಬಹು* ಜನರು ಸೇರಿದ್ದರು" (ವಚನ 27ಬಿ; ಒತ್ತಿ ಹೇಳಿದ್ದು ನನ್ನದು). ಒಬ್ಬ ಬರಹಗಾರನು ಪೇತ್ರನ ಈ ಚಿತ್ರಣವನ್ನು ನೋಡಿರಬಹುದು:

> ಪೇತ್ರನು, ಅವನ ಮನೆಯು ಸುಂದರವಾದ ನೆಲಹಾಸನ್ನು ಮತ್ತು ನುಣುಪು ಕಲ್ಲನ್ನು, ಹಾಗೂ ರೋಮಾಯರ ಶೈಲಿಯ ಮೇಜನ್ನು ಮತ್ತು ದಿವಾನವನ್ನು ರೇಷ್ಮೆಯ ಪರದೆಗಳನ್ನು ನೋಡಿದನು. ಅಲ್ಲಿದ್ದ ಸ್ತ್ರೀಯರೆಲ್ಲ ಉದ್ದವಾದ ಉಡುಪನ್ನು ಮತ್ತು ನಿಲುವಂಗಿಗಳನ್ನು ಧರಿಸಿದ್ದರು, ಸೈನ್ಯದ ಸಿಪಾಯಿಗಳು ತಮ್ಮ ತಮ್ಮ ಹಂತಕ್ಕೆ ತಕ್ಕಂತೆ ವಸ್ತ್ರಧಾರಿಗಳಾಗಿ ನಿಂತಿದ್ದರು, ಗುಲಾಮರು ಸಂದುಗಳಿಂದ ಅವರನ್ನು ಇಣಿಕಿ ನೋಡು ತ್ತಿದ್ದರು ...[16]

ಮೂರು ದಿವಸಗಳ ಹಿಂದೆಯಷ್ಟೆ, ಒಬ್ಬ ಅನ್ಯನ ಮನೆಯಂಗಳದಲ್ಲಿ ನಿಲ್ಲುವುದು ಅಸಾಧ್ಯ. ಮತ್ತು ಆ ವಿಧವಾದ ಗುಂಪನ್ನು ನೋಡುವದು ಅಸಾಧ್ಯ ಎಂದು ಪೇತ್ರನು ತಿಳಿದಿದ್ದನು, ಆ ಮೂರು ದಿವಸಗಳಲ್ಲಿ - ಪೇತ್ರನ ಜೀವಿತದಲ್ಲೂ, ಹೃದಯದಲ್ಲೂ ಬಹಳಷ್ಟು ಕಾರ್ಯಗಳು ಜರುಗಿದ್ದವು!

## ಉತ್ತಮನಾದ ಒಬ್ಬ ಮನುಷ್ಯನು ಸುವಾರ್ತೆಯನ್ನು ಕೇಳಿದನು (10:28-43)

ಅಪೊಸ್ತಲರನ್ನು ಅಲ್ಲಿ ಕೂಡಿದ್ದವರ ಸಂಗಡ ಮಾತನಾಡಿ:[17] ಯೆಹೂದ್ಯರು ಅನ್ಯ[18] ಜನರ ಕೂಡ ಹೊಕ್ಕು ಬಳಿಕೆ ಮಾಡುವದು ಯೆಹೂದ್ಯರ ಸಂಪ್ರದಾಯಕ್ಕೆ ವಿರುದ್ಧವಾಗಿದೆ ಎಂದು ನೀವು ಬಲ್ಲಿರಷ್ಟೇ. "ನನಗಂತೂ ಯಾವ ಮನುಷ್ಯನನ್ನಾದರೂ ಹೊಲೆಯನು ಇಲ್ಲವೆ ಅಶುದ್ಧನು ಅನ್ನಬಾರದೆಂದು ದೇವರು ತೋರಿಸಿದ್ದಾನೆ" (ವಚನ 28). "ದೇವರು ಶುದ್ಧ ಮಾಡಿದ್ದನ್ನು ಹೊಲೆ ಎನ್ನಬಾರದು" (10:15). ಮೂರು ದಿವಸಗಳ ಯೋಚಿಸಿದ ನಂತರ, ಪೇತ್ರನು ಕಾರ್ಯರೂಪಕ್ಕೆ ಇಳಿದಿದ್ದನು: "ನಾನು *ಯಾರನ್ನಾದರೂ* ಅಶುದ್ಧನು ಅಥವಾ ಹೊಲೆಯನು ಎಂದು ಹೇಳಬಾರದು ಎಂಬುದಾಗಿ ದೇವರು ತೋರಿಸಿರುವನು" (ಒತ್ತಿ ಹೇಳಿದ್ದು ನನ್ನದು).

ಪೇತ್ರನು ಮುಂದುವರಿಸಿ: "ಆದುದರಿಂದ ಯಾವ ಕಾರಣವನ್ನೂ ನೀಡದೆ ನಾನು ಬಂದಿರುವೆನು,[19] ಯಾಕೆಂದರೆ ಇದಕ್ಕಾಗಿಯೇ ನಾನು ಕಳುಹಿಸಲ್ಪಟ್ಟಿರುವೆನು" (ವಚನ 29ಎ). ಈ ಹಿಂದೆ ಪೇತ್ರನು, ಅಶುದ್ಧವಾದದ್ದನ್ನು ಕೊಂದು ತಿನ್ನುವ ವಿಷಯದಲ್ಲಿ ಕಾರಣ

ನೀಡಿ ಇಲ್ಲವೆಂದು ಹೇಳಿದ್ದನು, ಆದರೆ ದೇವರು ಅವನೊಂದಿಗೆ ಮೂರು ಸಾರಿ ಮಾತನಾಡಿ, ಅವನ ಮನುಷ್ಯರ ಸಂಗಡ ಹೋಗಲು ಅಪ್ಪಣೆ ಮಾಡಿದನು, ಆದ್ದರಿಂದ ಪೇತ್ರನು ಇನ್ನಾವುದೇ ಕಾರಣವನ್ನು ನೀಡಲಿಲ್ಲ. "ಈಗ ನೀವು ನನ್ನನ್ನು ಕಳಿಸಿದ ಉದ್ದೇಶವೇನು ನನಗೆ ತಿಳಿಸ ಬೇಕು ಎಂದು ಹೇಳಿದನು" (ವಚನ 29ಬಿ).

ಕೊರ್ನೇಲ್ಯನು ದೇವದೂತನು ಅವನನ್ನು ಸಂಧಿಸಿದ ವಿಚಾರವನ್ನು ತಿಳಿಸಿದನು. "ನಾನು ನಾಲ್ಕು ದಿವಸಗಳ ಹಿಂದೆ[20] ಮದ್ಯಾಹ್ನದ ಮೇಲೆ" ಮೂರು ಗಂಟೆಗೆ ನಡೆಯ ತಕ್ಕ ದೇವರ ಪ್ರಾರ್ಥನೆಯನ್ನು ಇಷ್ಟು ಹೊತ್ತಿನವರೆಗೂ ನನ್ನ ಮನೆಯಲ್ಲಿ ಮಾಡುತ್ತಿದ್ದಾಗ, "ಹೊಳೆ ಯುವ ವಸ್ತ್ರವನ್ನು ಧರಿಸಿಕೊಂಡಿದ್ದ ಒಬ್ಬ ಮನುಷ್ಯನು ನನ್ನೆದುರಿಗೆ ನಿಂತುಕೊಂಡನು" (ವಚನ 30). ಕೊರ್ನೇಲ್ಯನು, ಪರಲೋಕ ಸಂದೇಶಕನ ಸಂದೇಶವನ್ನು ತಿಳಿಸಿ ಮುಗಿಸಿದನು. ಆದ್ದರಿಂದ ನಾನು ತಡಮಾಡದೆ ನಿನ್ನ ಹತ್ತಿರ ಕಳುಹಿಸಿದೆನು, ನೀನು ಬಂದದ್ದು ಉಪಕಾರವಾಯಿತು. ಹೀಗಿರುವದರಿಂದ ಕರ್ತನು ನಿನಗೆ ಅಪ್ಪಣೆ ಕೊಟ್ಟಿರುವ ಎಲ್ಲಾ ಮಾತುಗಳನ್ನು ಕೇಳುವದಕ್ಕೆ ನಾವೆಲ್ಲರು ಈಗ ದೇವರ ಸನ್ನಿಧಾನದಲ್ಲಿ ಕೂಡಿದ್ದೇವೆ ಅಂದನು (ವಚನ 33). ಅವರು ಅನ್ಯರೇ ಆಗಿರಬಹುದು, ಆದರೆ ಅವರಲ್ಲಿ ಪ್ರಸಂಗಿಯ ಕನಸು ನೆರವೇರಿತು: ಅಲಿದ್ದ ಕೂಟಕ್ಕಾಗಿ, ಜನರು ಅಭ್ಯಾಸ ಅಥವಾ ಕರ್ತವ್ಯವೆಂದಾಗಲೀ, ಸುಮ್ಮನೇ ಸಂಧಿಸುವದಕ್ಕಾಗಲೀ ಸಂಧಿಸಲು ಅಥವಾ ಮನರಂಜನೆಗಾಗಿ ಬಾರದೆ, ದೇವರ ಅಪ್ಪಣೆಗಳನ್ನು ಕೇಳಲು ಮಾತ್ರ ಬಂದಿದ್ದರು!

ಇದನ್ನು ನೋಡಿ ಪೇತ್ರನು ಉತ್ತೇಜನಗೊಂಡು, ಉಪದೇಶ ಮಾಡಲಾರಂಭಿಸಿ: "ದೇವರು ಪಕ್ಷಪಾತಿಯಲ್ಲ,[21] ಯಾವ ಜನರಲ್ಲಿಯಾದರೂ ದೇವರಿಗೆ ಭಯಪಟ್ಟು ನೀತಿ ಯನ್ನು ನಡಿಸುವವರು ಆತನಿಗೆ ಮೆಚ್ಚಿಕೆಯಾಗಿದ್ದಾರೆಂದು ಈಗ ಸಂದೇಹವಿಲ್ಲದೆ ನನಗೆ ತಿಳಿದುಬಂದಿದೆ" (ವಚನಗಳು 34, 35). ಗ್ರೀಕ್ ಭಾಷೆಯಲ್ಲಿ "ಭೇದ ಭಾವ ಮಾಡುವವನು" ಸ್ವೀಕರಿಸು ಅಥವಾ ತೆಗೆದುಕೋ" ಎಂಬ ಪದಗಳನ್ನು "ಮುಖಾಮುಖಿ" ಎಂಬ ಪದಕ್ಕೆ ಬಳಸಿರುವರು. ಅಕ್ಷರಶಃ ಸ್ವಿಕರಿಸು (ನಿರಾಕರಿಸು). ಕೆಲವರು ಮುಖನೋಡಿ ಬೇಧ ಭಾವ ಮಾಡುವರು.[22] ಆದರೆ ದೇವರು ಮನುಷ್ಯನ ದೇಹ, ಅವನ ಜೀವಿತದ ಯೋಗ್ಯತೆ, ಅಥವಾ ಅವನ ಸ್ವಾಸ್ಥ್ಯವನ್ನು ನೋಡಿ ಗೌರವಿಸುವವನಲ್ಲ.[23] ಆದರೆ "ದೇವರು ಮನುಷ್ಯನ ಹೃದಯ ಹಾಗೂ ಜೀವನವನ್ನು ನೋಡುತ್ತಾನೆ! ಪ್ರತಿ ಜನಾಂಗದಲ್ಲೂ [*ಯಾವುದೇ* ದೇಶ] ಇರುವ ಭಯ ಭಕ್ತಿವುಳ್ಳ ಮನುಷ್ಯನನ್ನು [ಅಥವ ಸ್ತ್ರೀಯನ್ನು] ಮತ್ತು ನೀತಿ ಕಾರ್ಯವನ್ನು ಮಾಡುವವನನ್ನು[24] [ಯೆಹೂದ್ಯ ಅಥವಾ ಅನ್ಯ ದೇವರು] ತನ್ನ ಕಡೆಗೆ[25] ಆಹ್ವಾನಿಸುತ್ತಾನೆ"! (ಒತ್ತಿ ಹೇಳಿದ್ದು ನನ್ನದು.)

ಈ ವಚನಗಳನ್ನು ನಮ್ಮಲ್ಲಿ ಅನೇಕರು ಕೇಳಿದ್ದೇವೆ, ಆದರೆ ಅದರಲ್ಲಿರುವ ಆಶ್ಚರ್ಯಕರ ವಿಷಯವನ್ನು ನಮ್ಮಿಂದ ಕಣ್ಮರೆಯಾಗಿರುತ್ತದೆ. ಪೌಲನಿಗಾಗಿ ಯೇಸುವಿನ ಪ್ರತ್ಯಕ್ಷವು ಪೇತ್ರನ ಜೀವಿತವನ್ನು ಮತ್ತು ಮನಸ್ಸನ್ನು ಪರಿವರ್ತನೆಗೆ ಕಾರಣವಾಗಿದೆ ಎಂಬುದು ಈ ಸತ್ಯದ ಮನೋವಲಿಕೆಯಾಗಿದೆ. ದೇವರು ಎಲ್ಲಾ ಜನರನ್ನು ಅಹ್ವಾನಿಸುತ್ತಿರಲಿ - ನಿನ್ನನ್ನು ನನ್ನನ್ನು ಸಹ.

ಯೆಹೂದ್ಯ ಕ್ರೈಸ್ತರು ಅನ್ಯ ಜನರನ್ನು ಸ್ವೀಕರಿಸುವ ಪೂರ್ವಸಿದ್ಧತೆಗೊಳಿಸುವಂತಹ ಮುಂದಿನ ಹೆಜ್ಜೆಯು ಇದಾಗಿತ್ತು: ಯೆಹೂದ್ಯರಲ್ಲದವರಿಗೆ ಮೊದಲನೆಯ ಸಾರಿ ಸುವಾರ್ತೆಯು ಸಾರಲ್ಪಟ್ಟಿತ್ತು ಪುನಃ ಪೇತ್ರನು "ದೇವರ ರಾಜ್ಯದ ಕೀಲಿಗಳನ್ನು" ಉಪಯೋಗಿಸಿದನು (ಮತ್ತಾಯ 16:19). ವಚನ 36-43ರವರೆಗೆ ಪೇತ್ರನ ಸಂದೇಶದ ಚಿಕ್ಕ ಸಾರಾಂಶವನ್ನು ನೀಡಲಾಗಿದೆ.[26] ಪೇತ್ರನು ಯೇಸುವಿನ ಜೀವನ ಚರಿತ್ರೆಯನ್ನು ಹೇಳಲು ಪ್ರಾರಂಭಿಸಿದನು:[27]

ಎಲ್ಲಾ ಜನಗಳಿಗೂ ಕರ್ತನಾಗಿರುವ ಯೇಸು ಕ್ರಿಸ್ತನ ಮೂಲಕ ದೇವರು

ಸಮಾಧಾನದ ಶುಭಸಮಾಚಾರವನ್ನು ಪ್ರಕಟಿಸುತ್ತಾ ಇಸ್ರಾಯೇಲ್[28] ಜನರಿಗೆ ಅನುಗ್ರಹಿಸಿದ ವಾಕ್ಯವು ನಿಮಗೇ ತಿಳಿದಿರುವದು.[29] ದೀಕ್ಷಾಸ್ನಾನಮಾಡಿಸಿಕೊಳ್ಳ ಬೇಕೆಂದು ಯೋಹಾನನು[30] ಸಾರಿದ ತರುವಾಯ ಈ ವಾಕ್ಯವು[31] ಗಲಿಲಾಯದಿಂದ ಪ್ರಾರಂಭವಾಗಿ ಯುದಾಯದಲ್ಲೆಲ್ಲಾ[32] ಪ್ರಬಲವಾಯಿತು.[33] ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ[34] ಅಭಿಷೇಕಿಸಿದನು; ದೇವರು ಆತನ ಸಂಗಡ ಇದ್ದದರಿಂದ ಆತನು ಉಪಕಾರಗಳನ್ನು[35] ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು[36] ಗುಣಮಾಡುತ್ತಾ ಸಂಚರಿಸಿದನು;[37] ಇದೆಲ್ಲಾ ನಿಮಗೆ ಗೊತ್ತಾಗಿರುವದಷ್ಟೆ.[38] ಆತನು ಯೆಹೂದ್ಯರ ಸೀಮೆಯಲ್ಲಿಯೂ[39] ಯೆರೂಸಲೇಮಿನಲ್ಲಿಯೂ ಮಾಡಿದ ಎಲ್ಲಾ ಕಾರ್ಯಗಳಿಗೆ ನಾವು ಸಾಕ್ಷಿಗಳಾಗಿದ್ದೇವೆ (ವಚನಗಳು 36-39ಎ).

ನಂತರ ಪೇತ್ರನು ಸುವಾರ್ತೆಯ ಬುನಾದಿಯಾದ ಯೇಸುವಿನ ಪುನರುತ್ಥಾನದ ವಿಷಯದ ಕುರಿತು ಮಾತನಾಡಿದನು:

ಆತನನ್ನು ಮರದ ಕಂಭಕ್ಕೆ ತೂಗಹಾಕಿ ಕೊಂದರು.[40] ದೇವರು ಆತನನ್ನು ಮೂರನೆಯ ದಿನದಲ್ಲಿ ಎಬ್ಬಿಸಿ ಪ್ರತ್ಯಕ್ಷನಾಗುವಂತೆ ಮಾಡಿದನು;[41] ಆತನು ಎಲ್ಲರಿಗೆ ಪ್ರತ್ಯಕ್ಷನಾಗದೆ ದೇವರು ಮುಂಚಿತವಾಗಿ ಆರಿಸಿ ಕೊಂಡಿದ್ದ ಸಾಕ್ಷಿಗಳಾದ ನಮಗೆ ಪ್ರತ್ಯಕ್ಷನಾದನು.[42] ಆತನು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದ ಮೇಲೆ ನಾವು ಆತನ ಸಂಗಡ[43] ಅನ್ನಪಾನಗಳನ್ನು ತಕ್ಕೊಂಡೆವು (ವಚನಗಳು 39ಬಿ-41).

ಪೇತ್ರನು ಯೇಸುವಿನ ಜೀವನ ಚರಿತ್ರೆಯನ್ನು ಹೇಳಲು ಪ್ರಾರಂಭಿಸಿದನು:

ಆತನೇ ಜೀವಿತರಿಗೂ ಸತ್ತವರಿಗೂ ನ್ಯಾಯಾಧಿಪತಿಯಾಗಿ[44] ದೇವರಿಂದ ನೇಮಕವಾದವನು ಎಂಬದನ್ನು ಜನರಿಗೆ[45] ಸಾರಿ ಸಾಕ್ಷಿ ಹೇಳಬೇಕೆಂದು ದೇವರು ನಮಗೆ ಅಪ್ಪಣೆಕೊಟ್ಟನು.[46] ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ[47] ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿ ಹೇಳಿದ್ದಾರೆ ಅಂದನು (ವಚನಗಳು 42, 43).

ಪೇತ್ರನ ಕೂಟದಲ್ಲಿದ್ದವರು ಅವರು ಮಾಡಬೇಕಾದದ್ದನ್ನು ತಿಳಿಸಿ (2:38, 10:48) ಅವರನ್ನು ಎಚ್ಚರಿಸಿದನು (ಹೋಲಿಸು 2:40), ಆದರೆ ಅವನ ಸಂದೇಶಕ್ಕೆ ಪ್ರಶ್ನೆಯುಂಟಾಯಿತು. ಪಂಚಾಶತ್ತಮ ಹಬ್ಬದ ದಿವಸ ಪೇತ್ರನು ಪ್ರಸಂಗಿಸಿದಾಗ ಪಶ್ಚಾತ್ತಾಪಗೊಂಡ ಪಾಪಿಗಳು ಅವನ ಸಂದೇಶಕ್ಕೆ ಸಂಬಂಧಿಸಿದಂತೆ, ಈಗ ನಾವೇನು ಮಾಡೋಣ? ಎಂದು ಪ್ರಶ್ನಿಸಿದರು (2:37). ಅವನು ಪ್ರಸಂಗಿಸಿದ ನಂತರ ಕುಂಟನಾದ ಭಿಕ್ಷುಕನು ಗುಣವಾದನು, ಅವನ ಸಂದೇಶಕ್ಕೆ ವಿರುದ್ಧವಾಗಿ ಜನರು ಅವನನ್ನು ಸೆರೆಹಿಡಿಯಲು ಬಂದರು (4:1-3). ಆದರೆ ಈಗ ಅವನ ಸಂದೇಶದ ಮದ್ಯ ದೇವರು ಒಂದು ಪ್ರಶ್ನೆಯನ್ನು ತಂದನು.

## ಉತ್ತಮನಾದ ಮನುಷ್ಯನು ಆತ್ಮನನ್ನು ಸ್ವೀಕರಿಸಿದನು (10:44-46; 11:15-17)

ಯೆಹೂದ್ಯ ಕ್ರೈಸ್ತರು ಅನ್ಯ ಜನರನ್ನು ಸ್ವೀಕರಿಸುವಂತ ಪ್ರಮುಖವಾದ ಹೆಜ್ಜೆಯ ಸಮಯವು ಇದಾಗಿತ್ತು. ದೇವರು ಕೊರ್ನೇಲ್ಯನನ್ನು ಮತ್ತು ಪೇತ್ರನನ್ನು ಅದ್ಭುತವಾಗಿ ಸಿದ್ಧಪಡಿಸಿದಂತೆಯೇ, ಪುನಃ ಆತನು ತನ್ನ ಶಕ್ತಿಯಿಂದ ಸಭೆಯನ್ನು ಸಿದ್ಧಪಡಿಸಿದನು.

> ಪೇತ್ರನು ಈ ಮಾತುಗಳನ್ನು ಇನ್ನೂ ಹೇಳುತ್ತಿರುವಾಗ ಅವನ ವಾಕ್ಯವನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮವರವು ಇಳಿಯಿತು.[48] ಅವರು ನಾನಾ ಭಾಷೆಗಳನ್ನಾಡುತ್ತಾ ದೇವರನ್ನು ಕೊಂಡಾಡುತ್ತಾ ಇರುವದನ್ನು ಪೇತ್ರನ ಸಂಗಡ ಬಂದಿದ್ದ ಯೆಹೂದ್ಯರಾದ ವಿಶ್ವಾಸಿಗಳು ಕೇಳಿದಾಗ - ಅನ್ಯಜನಗಳಿಗೂ ಪವಿತ್ರಾತ್ಮದಾನ ಮಾಡಲ್ಪಟ್ಟಿದೆಯಲ್ಲಾ ಎಂದು ಅತ್ಯಾಶ್ಚರ್ಯಪಟ್ಟರು[49] (10:44-46ಎ).

"ಪರಿಶುದ್ಧಾತ್ಮನವರ" ಎಂಬ ವ್ಯಾಖ್ಯಾನವು ಪರಿಶುದ್ಧಾತ್ಮನಿಂದ ಒಂದು ವರ ಅಥವಾ ಪರಿಶುದ್ಧಾತ್ಮನೇ ಒಂದು ವರ ಎಂಬುದಾಗಿರಬಹುದು. 2:38ರಲ್ಲಿ ಇದನ್ನು ಪರಿಶುದ್ಧಾತ್ಮನೇ ಒಂದು ವರ ಎಂದು ತಿಳಿಸಲಾಗಿದೆ.[50] ಈ ವಾಕ್ಯ ಭಾಗದಲ್ಲಿ ಪರಿಶುದ್ಧಾತ್ಮನಿಂದ ದೊರೆಯುವ ವಿಶೇಷವರ, ಪರಿಶುದ್ಧಾತ್ಮನ ದೀಕ್ಷಾಸ್ನಾನ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಇದರ ಕುರಿತ ವಿವರಣೆಯನ್ನು 11ನೇ ಅದ್ಯಾಯದಲ್ಲಿ ತಿಳಿಸಿರುವನು:

> ನಾನು ಮಾತಾಡುವದಕ್ಕೆ ಪ್ರಾರಂಭಿಸಿದಾಗ ಪವಿತ್ರಾತ್ಮವರವು ಮೊದಲು ನಮ್ಮ ಮೇಲೆ ಇಳಿದಂತೆ ಅವರ ಮೇಲೆಯೂ ಇಳಿಯಿತು.[51] ಆಗ - ಯೋಹಾನನಂತೂ ನೀರಿನ ದೀಕ್ಷಾಸ್ನಾನಮಾಡಿಸಿದನು; ನಿಮಗಾದರೋ ಪವಿತ್ರಾತ್ಮದಲ್ಲಿ ಸ್ನಾನವಾಗುವದು ಎಂದು ಯೇಸು ಸ್ವಾಮಿ ಹೇಳಿದ ಮಾತು ನನ್ನ ನೆನಪಿಗೆ ಬಂತು. ದೇವರು ಕರ್ತನಾಗಿರುವ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ನಮಗೆ ಕೊಟ್ಟ ವರಕ್ಕೆ ಸರಿಯಾದ ವರವನ್ನು ಅವರಿಗೆ ಕೊಟ್ಟಿರಲಾಗಿ ದೇವರನ್ನು ತಡೆಯುವದಕ್ಕೆ ನಾನು ಶಕ್ತನೋ? (11:15-17).

ಈ ವಾಕ್ಯ ಭಾಗದಲ್ಲಿ "ನಾವು" ಎಂಬುದು ಅಪೊಸ್ತಲರ ಕುರಿತಾಗಿರುತ್ತದೆ. ಅಪೊಸ್ತಲರಿಗೆ ಕರ್ತನು, "ನಿಮಗೆ ಪರಿಶುದ್ಧಾತ್ಮನಲ್ಲಿ ದೀಕ್ಷಾಸ್ನಾನವಾಗುವದು" ಎಂದು ಹೇಳಿದ್ದನು (1:2-5). ಇದಕ್ಕೆ ಸಂಬಂಧ ಪಟ್ಟಂತೆ ಪೇತ್ರನು (ವಚನ 47). ಕೊರ್ನೇಲ್ಯನ ಮನೆಯವರಿಗೂ ಮತ್ತು ಮೊದಲ ಶಿಷ್ಯರ ನಡುವೆ ಹೋಲಿಕೆಯನ್ನು ತೋರಿಸಿದನೇ ವಿನ ಕೊರ್ನೇಲ್ಯನ ಮನೆಯವರಿಗೂ ಮತ್ತು ಪಂಚಾಶತ್ತಮ ಹಬ್ಬದ ದಿನದಂದು ನಂಬಿದ 3,000 ಜನರ ನಡುವಿನ ಹೋಲಿಕೆಯನ್ನು ತೋರಿಸಲಿಲ್ಲ (ಹೋಲಿಸು 11:15; 15:8).[52] ಕೊರ್ನೇಲ್ಯನು ಮತ್ತು ಅವನ ಮನೆಯವರು "ಅದೇ ವರವನ್ನು" ಹೊಂದಿದರೆಂದು ಪೇತ್ರನು ಒತ್ತಿ ಹೇಳಿರುವನು ("ವರ" ಎಂಬ ಪದವನ್ನು ನೋಡುತ್ತೇವೆ). ಅವನು ಮತ್ತು ಇತರ ಅಪೊಸ್ತಲರು ಸ್ವೀಕರಿಸಿದಂತ ಪರಿಶುದ್ಧಾತ್ಮನ ಸ್ನಾನವನ್ನು ಅವರು ಸಹ ಹೊಂದಿದರು.

ಕೊರ್ನೇಲ್ಯನು ಮತ್ತು ಅವನ ಸ್ನೇಹಿತರು ಮಾತನಾಡಿದ ಅನ್ಯಭಾಷೆಯು ಸಾಮಾನ್ಯವಾದ "ಉದ್ವೇಗದ ಮಾತುಗಳಾಗಿರದೇ" ಅದು ತಾತ್ಕಲಿಕವಾದ ಭಾಷೆಗಳಾಗಿತ್ತು.[53] ಅವರು ಸಹ ಅಪೊಸ್ತಲರು ಸ್ವೀಕರಿಸಿದ[54] ಮತ್ತು ಅಪೊಸ್ತಲರು ಮಾತನಾಡಿದ ಒಂದೇ ಭಾಷೆಗಳನ್ನು ಹಾಗೂ ಒಂದೇ ವರವನ್ನು ಹೊಂದಿದರು (2:4, 6, 8).[55] ಈ ಭಾಹಿರವಾದಂತ ಪ್ರಾಯೋಜನೆಯು ಅನ್ಯರು ಸಹ ಪರಿಶುದ್ಧಾತ್ಮನ ಸ್ನಾನವನ್ನು ಹೊಂದಿದರೆಬುದಕ್ಕೆ ಸಾಕ್ಷಿಯಾಯಿತು.

"ಆರಂಭದಲ್ಲಿ" ಎಂಬ ಪದವು ಸಹ ಪ್ರಮುಖವಾದದ್ದೆ ಅಪೊಸ್ತಲರ ಕೃತ್ಯಗಳು 10ರಲ್ಲಿ ನಡೆದ ಘಟನೆಯನ್ನು ಪೇತ್ರನು ಕೆಲವು ದಿವಸಗಳ, ವಾರಗಳ, ಅಥವಾ ತಿಂಗಳುಗಳ ಹಿಂದೆ ನಡೆದ ಪರಿಶುದ್ಧಾತ್ಮನ ದೀಕ್ಷಾಸ್ನಾನಕ್ಕೆ ಹೋಲಿಸುತ್ತಿರುವದಿಲ್ಲ. ಅಪೊಸ್ತಲರ ಕೃತ್ಯಗಳು 2ರಲ್ಲಿ ಅನೇಕ ವರ್ಷಗಳ ಹಿಂದೆ ನಡೆದ ಘಟನೆಗಳನ್ನು ತಿಳಿಸುತ್ತಿದ್ದಾನೆ.

> ಆರಂಭದಲ್ಲಿ ಜನರು ಆತ್ಮನನ್ನು ಸ್ವೀಕರಿಸುವಾಗ ಯಾವ ಅನುಭವವನ್ನು ಹೊಂದಿದ್ದರೋ ಅದೇ ಅನುಭವವನ್ನು ಪರಿವರ್ತನೆಗೊಂಡ ಅನ್ಯರು ಸಹ ಹೊಂದಿದರೆಂದು ಪೇತ್ರನು ತಿಳಿಸುತ್ತಿದ್ದಾನೆ.[56]

> ಕೊರ್ನೇಲ್ಯನ ಮನೆಯಲ್ಲಿ ಉಂಟಾದ ಕಾರ್ಯದ ಕುರಿತು ಪೇತ್ರನು ಪಂಚಾಶತ್ತಮ ಹಬ್ಬದ ದಿನದಲ್ಲಿ ನಡೆದ ಘಟನೆಯ ಉದಾಹರಣೆಯನ್ನು ನೀಡುತ್ತಿದ್ದಾನೆ! ಇದು ಸಹಜವಾದ "ಆತ್ಮನ ಸ್ನಾನ" ಎಂಬುದಾಗಿ ತಿಳಿಸಲ್ಪಟ್ಟು (ಅಪೊಸ್ತಲರ ಕೃತ್ಯಗಳು 11:16), ಅದರೊಂದಿಗೆ ಅನ್ಯ ಭಾಷೆಯನ್ನು ಮಾತನಾಡಿದರು, ಆದರೆ ಆದಿ ಸಭೆಯಲ್ಲಿ ಇದು ಪ್ರತಿದಿನದ ಕ್ರಿಯೆಯಾಗಿರಲಿಲ್ಲ.[57]

ಹಿಂದೆ ತಿಳಿಸಿದಂತೆ ಅಪೊಸ್ತಲರ ಕೃತ್ಯಗಳು 2 ಮತ್ತು 10ರಲ್ಲಿ 2 ಸಾರಿ ಮಾತ್ರ ಈ ಕಾರ್ಯವನ್ನು ನೋಡುತ್ತೇವೆ.

ದೇವರು ಏಕೆ ಕೊರ್ನೇಲ್ಯನಿಗೂ ಮತ್ತು ಅವನ ಸ್ನೇಹಿತರ ಮೇಲೂ ಆತ್ಮನನ್ನು ಸುರಿಸಿದನು? ಅನ್ಯರನ್ನು ರಕ್ಷಿಸುವದೇ ಇದರ ಉದ್ದೇಶವೆಂಬುದು ಕೆಲವರ ಅಭಿಪ್ರಾಯ[58] ಸಹಜವಾಗಿ ಅದು ತಪ್ಪಾದ ಅಭಿಪ್ರಾಯವಾಗಿದೆ. ಅಪೊಸ್ತಲರ ಕೃತ್ಯಗಳು 2ರಲ್ಲಿ ಪರಿಶುದ್ಧಾತ್ಮನ ಸ್ನಾನವು ಅಪೊಸ್ತಲರನ್ನು ರಕ್ಷಿಸಲಿಲ್ಲ, ಅಪೊಸ್ತಲರ ಕೃತ್ಯಗಳು 10ರಲ್ಲಿ ಅದು ಕೊರ್ನೇಲ್ಯನನ್ನು ಸಹ ರಕ್ಷಿಸಲಿಲ್ಲ. ದೇವರ ಈ ನೇರವಾದ ಕಾರ್ಯಚರಣೆಯಿಂದ ಅನ್ಯರು ರಕ್ಷಿಸಲ್ಪಡುವದಾಗಿದ್ದರೆ, ಪೇತ್ರನನ್ನು ಅಲ್ಲಿ ಕಳುಹಿಸುವ ಅಗತ್ಯತೆಯಿರಲಿಲ್ಲ. ದೇವದೂತನು ತಿಳಿಸಿ ಕೊರ್ನೇಲ್ಯನು ಮತ್ತು ಅವನ ಮನೆಯವರು ಆತ್ಮನ ಸ್ನಾನದಿಂದ ರಕ್ಷಿಸಲ್ಪಡದೇ, *ವಾಕ್ಯದಿಂದಲೇ* ರಕ್ಷಿಸಲ್ಪಡುವರೆಂದು ಹೇಳಿದ್ದನು (11:14).

ಕೊರ್ನೇಲ್ಯನು ಮತ್ತು ಅವನ ಮನೆಯವರು ಈಗಾಗಲೇ ರಕ್ಷಿಸಲ್ಪಟ್ಟಿದ್ದರೆಂಬುದಕ್ಕೆ ಆತ್ಮನ ಸ್ನಾನವು ಪ್ರಮುಖವಾದ ಆಲೋಚನೆಯನ್ನು ನೀಡಿತ್ತು. ಈ ಸಿದ್ಧಾಂತದ ಪ್ರಕಾರ, ಕೊರ್ನೇಲ್ಯನು ಮತ್ತು ಆತನ ಸಂಗಡಿಗರು ನಂಬಿದಾಗಲೇ ರಕ್ಷಿಸಲ್ಪಟ್ಟಿದ್ದರು, ದೇವರು ತನ್ನ ಆತ್ಮನನ್ನು ಕಳುಹಿಸುವದರ ಮೂಲಕ ಈ ಸಿದ್ಧಾಂತವನ್ನು ದೃಢಪಡಿಸಿದನು.[59] ಈ ಸಿದ್ಧಾಂತದ ಪ್ರಕಾರ ರಕ್ಷಣೆಗೆ ಸ್ನಾನದ ಅಗತ್ಯವಿಲ್ಲ. ಏಕೆಂದರೆ ಅನ್ಯರು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೊದಲೇ ಆತ್ಮನು ಇಳಿದು ಬಂದಿದ್ದನು.

ಈ ಸಂದರ್ಭದಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಮೊದಲನೆಯದಾಗಿ ಆತ್ಮನು ಬಂದಂತ ಸಂದರ್ಭವನ್ನು ನಿಶ್ಚಯವಾಗಿ ತಿಳಿಸಲು ಅಸಾಧ್ಯ. ಅಪೊಸ್ತಲರ ಕೃತ್ಯಗಳು 11ರಲ್ಲಿ, ಪೇತ್ರನು ನಡೆದ ಸಂಗತಿಯನ್ನು ಅವರಿಗೆ "ಕ್ರಮವಾಗಿ ವಿವರಿಸಿ" (11:4),[60] "ನಾನು ಮಾತನಾಡುವದಕ್ಕೆ[61] *ಪ್ರಾರಂಭಿಸಿದಾಗ* ಪರಿಶುದ್ಧಾತ್ಮ ವರವು ಅವರ ಮೇಲೆಯೂ ಇಳಿಯಿತು ಅಂದನು, ..." (ಅಪೊಸ್ತಲರ ಕೃತ್ಯಗಳು 11:15; ಒತ್ತಿ ಹೇಳಿದ್ದು ನನ್ನದು). NCVಯಲ್ಲಿ "ನನ್ನ ಪ್ರಸಂಗವನ್ನು ಆರಂಭಿಸಿದಾಗ, ಪರಿಶುದ್ಧಾತ್ಮನು ಅವರ ಮೇಲೆ ಬಂದನು." ಲಿವಿಂಗ್ ಬೈಬಲ್‌ನಲ್ಲಿ "ನಾನು ಸಂದೇಶವನ್ನು ಆರಂಭಿಸುವಾಗ, ಪರಿಶುದ್ಧಾತ್ಮನು ಅವರ ಮೇಲೆ ಇಳಿದನು." ಇನ್ನೊಂದು ವಾಕ್ಯದಲ್ಲಿ ಅನ್ಯರಿಗೆ ಯೇಸು ಮಾಡಿದ ಕಾರ್ಯವನ್ನು ಪೇತ್ರನು ವಿವರಿಸುವ ಮೊದಲೇ ಕೊರ್ನೇಲ್ಯನನ್ನು ಹಾಗೂ ಅವನ ಸಂಗಡಿಗರ ಮೇಲೆ ಆತ್ಮನು ಈಗಾಗಲೇ ಇಳಿದು ಬಂದಿರುವ ಸಾಧ್ಯತೆಯಿತು.[62] ಇದು ಸತ್ಯವಾಗಿದ್ದರೆ ಈ ಸಿದ್ಧಾಂತದ ಮೂಲಕ ರಕ್ಷಣೆಗೆ *ದೀಕ್ಷಾಸ್ನಾನವಾಗಲಿ ನಂಬಿಕೆಯಾಗಲಿ* ಅನಗತ್ಯವೆಂಬುದಾಗಿ ನೋಡುತ್ತೇವೆ.[63]

ಇದರಲ್ಲಿ ಅಡಕವಾಗಿರುವ ಇನ್ನೊಂದು ಸಮಸ್ಯೆಯೇನೆಂದರೆ ಈ ಕಥೆಯಲ್ಲಿ ನಡೆದಿರುವ ಅದ್ಭುತವಾದ ಪ್ರಾಯೋಜನೆಯು ಇತರೇ ಸಂಗತಿಗಳನ್ನು ಅಲಕ್ಷಮಾಡುವಂತದ್ದಾಗಿದೆ. ದೇವರು ರಕ್ಷಿಸಲ್ಪಡದವರಿಗೆ ಆತ್ಮನನ್ನು ಕಳಿಸುವದಿಲ್ಲವೆಂಬ ಮೂಲ ತರ್ಕವು ಇಲ್ಲಿರುತ್ತದೆ. ರಕ್ಷಿಸಲ್ಪಡದವರಿಗೆ ದೇವರು ದೇವದೂತರನ್ನು ಕಳಿಸುವದಿಲ್ಲವೆಂಬ ಕಾರಣವು ಏಕಿರುವದಿಲ್ಲ? ದೀಕ್ಷಸ್ನಾನದ ಮೊದಲು ದೇವರು ಆತ್ಮನನ್ನು ಕಳುಹಿಸಿರುವದರಿಂದ ದೀಕ್ಷಾಸ್ನಾನದ ಅನಗತ್ಯವನ್ನು ನೋಡುತ್ತೇವೆ, ಕೊರ್ನೇಲ್ಯನು ನಂಬುವದಕ್ಕಿಂತ ಮೊದಲೇ ದೇವರು

ದೇವದೂತನನ್ನು ಅವನ ಬಳಿ ಕಳುಹಿಸಿರುವಂತದ್ದು, ನಂಬಿಕೆಯು ಸಹ ಅನಗತ್ಯವೆಂದು ಸಿದ್ಧಾಂತವಾಗುತ್ತದೆ.

ಇಲ್ಲಿರತಕ್ಕ ಪ್ರಮುಖವಾದ ಸಮಸ್ಯೆ ಏನೆಂದರೆ, ದೇವರ ಉದ್ದೇಶಿತ ಆತ್ಮನ ಸ್ನಾನವು ಕೊರ್ನೇಲ್ಯನ ರಕ್ಷಣೆಗೆ ಸೂಚನೆಯಾಗಿರುವದಿಲ್ಲ ಎಂಬುದೇ. ಇನ್ನೊಂದು ವಿಧದಲ್ಲಿ, ಯೆಹೂದ್ಯ ಕ್ರೈಸ್ತರು ಅನ್ಯರಾದವರನ್ನು ಅಂಗೀಕರಿಸಬೇಕೆಂಬ ಸೂಚನೆಯೂ ಇದಾಗಿರುತ್ತದೆ. ಒಂದು ವಿಷಯದಿಂದ ಉಂಟಾಗಬಹುದಾದ ಉಪಯೋಗದ ನಿಮಿತ್ತವಾಗಿ ಅದರ ಉದ್ದೇಶ ವನ್ನು ನಾವು ಗ್ರಹಿಸಬಹುದು (ನಾನು ಒಂದು ಕುರ್ಚಿಯನ್ನು, ನೋಡದೆ ಇದ್ದರು, ಅದರ ಬಳಕೆಯನ್ನು ಗಮನಿಸುವಾಗ, ಅದು ಎಂಥದ್ದು ಎಂದು ತಿಳಿಯುತ್ತೇನೆ). ಮೂರು ಸಂದರ್ಭಗಳಲ್ಲಿ (10:47, 48; 11:17; 15:8, 9). ದೇವರು ಅನ್ಯರನ್ನು ಅಂಗೀಕರಿಸುವನು ಎಂಬ ಸಿದ್ಧಾಂತವನ್ನು ಈ ಕಾರ್ಯದ ಮೂಲಕ ಪೇತ್ರನು ದೃಢಪಡಿಸಿರುವನು, ಈ ಕಾರಣದಿಂದ ಸಭೆಯು ಅವರನ್ನು ಅಂಗೀಕರಿಸಲೇ ಬೇಕು. ಆದುದರಿಂದ, ಆ ಅದ್ಭುತದ ಉದ್ದೇಶವು *ಇದೇ* ಆಗಿತ್ತು.

ಕೆಲವರು ಅಪೊಸ್ತಲರಕೃತ್ಯ 10ನ್ನು "ಅನ್ಯರ ಪಂಚಾಶತಮದ ಪ್ರಪಂಚ" ಎಂದು ಕರೆದಿರುವರು, ಆದರೆ ಕೊರ್ನೇಲ್ಯನ ಮನೆಯಲ್ಲಿ ಉಂಟಾದ ಎರಡನೆಯ ಅನುಭವವು, ಮೊದಲ ಪಂಚಾಶತ್ತಮ ದಿನದಲ್ಲಿ ಅನ್ಯರಿಗೆ ಉಂಟಾದ ಅನುಭವವಾಗಿರಲಿಲ್ಲ.[64] ಅಪೊಸ್ತಲರಕೃತ್ಯ 2ರಲ್ಲಿ ಪೇತ್ರನು ಯೋವೇಲ ಗ್ರಂಥದಿಂದ, "*ಎಲ್ಲಾ* ಮನುಷ್ಯರ" ಮೇಲೆ ಆತ್ಮನು ಸುರಿಸಲ್ಪಡುವನು ಎಂಬ ವಾಕ್ಯವನ್ನು ನೆನಪು ಮಾಡಿದ್ದನು (2:17; ಒತ್ತಿ ಹೇಳಿದ್ದು ನನ್ನದು). ಈ ಸಮಯದ ವರೆಗೆ, *ಯೆಹೂದ್ಯರು* ಮಾತ್ರ (ಮಾನವರ ಅಲ್ಪ ಭಾಗ) ಪರಿಶುದ್ಧಾತ್ಮನನ್ನು ಹೊಂದಿದ್ದರು.[65] ಈಗ ಆತನು ಅನ್ಯರಾದ ಲೋಕದ ಪ್ರತಿನಿಧಿಗಳ ಮೇಲೂ ಸುರಿಯಲ್ಪಟ್ಟಿದ್ದನು! ದೇವರು "ತಾನು ಪಕ್ಷಪಾತಿಯಲ್ಲ" ಎಂದು ಸಂಶಯವಿಲ್ಲದೆ ದೃಢಪಡಿಸಿದ್ದನು. ಕೊರ್ನೇಲ್ಯನ ಪರಿವರ್ತನೆಯಲ್ಲಿ ನಡೆದ ಅದ್ಭುತವು ಪ್ರತಿಯೊಬ್ಬರ ಪರಿವರ್ತನೆಯಲ್ಲೂ ನಡೆಯ ಬೇಕೆ? ಇಲ್ಲ. ಒಂದು ಸಾರಿ ದೇವರು ತನ್ನ ಕಾರ್ಯವನ್ನು ಮಾಡಿದ ಮೇಲೆ ಪುನಃ ಪುನಃ ಆ ಕಾರ್ಯದ ಅಗತ್ಯತೆ ಇದಯೆ.

ನಮ್ಮ ಕಥೆಯನ್ನು ಮುಂದುವರಿಸೋಣ. ದೇವರು ತನ್ನ ಯೋಜನೆಯನ್ನು ನೆರವೇರಿ ಸಲು, ಪೇತ್ರನ ಪ್ರಸಂಗದ ಸಮಯದಲ್ಲಿ, ಅವನ ಕೇಳುಗರಿಗೆ ಆತ್ಮನನ್ನು ಸುರಿಸಿದನು. ಅಪೊಸ್ತಲರ ಕೃತ್ಯಗಳು 10:45 ಆರು ಜನ ಯೆಹೂದ್ಯ ಸಾಕ್ಷಿಗಳಲ್ಲಿ ಉಂಟಾದ ಪ್ರತಿಕ್ರಿಯೆಯನ್ನು ತೋರಿಸುತ್ತದೆ. "ಪೇತ್ರನ ಸಂಗಡ ಬಂದಿದ್ದಸುನ್ನತಿ ಹೊಂದಿದ ವಿಶ್ವಾಸಿಗಳೆಲ್ಲರೂ ಅನ್ಯ ಜನಗಳಿಗೂ ಪವಿತ್ರಾತ್ಮದಾನ ಮಾಡಲ್ಪಟ್ಟಿದೆಯಲ್ಲಾ ಎಂದು ಅತ್ಯಾಶ್ಚರ್ಯಪಟ್ಟರು." 11:16, 17, ರಲ್ಲಿ ಪೇತ್ರನ ಪ್ರಗತಿಪರವಾದ ಯೋಚನೆಯನ್ನು ನೋಡುತ್ತೇವೆ: "ನಾನು, ಕರ್ತನು ಬಳಸಿದ ಪದಗಳನ್ನು ನೆನಪು ಮಾಡಿಕೊಳ್ಳುತ್ತೇನೆ ... ಯೋಹಾನನು ನೀರಿನ ಸ್ನಾನ ಮಾಡಿಸಿದನು, ಆದರೆ ನೀವು ಪವಿತ್ರಾತ್ಮನಿಂದ ಸ್ನಾನ ಹೊಂದುವಿರಿ. ದೇವರು ನಮಗೆ ನೀಡಿದ ವರವನ್ನು ಅವರಿಗೂ ನೀಡಿದರೆ, ನಾವು ದೇವರ ಮಾರ್ಗಕ್ಕೆ ಅಡ್ಡಿಪಡಿಸಬಹುದೇ?"

## ಉತ್ತಮನಾದ ಮನುಷ್ಯನು ರಕ್ಷಿಸಲ್ಪಟ್ಟನು (10:47, 48)

ಪೇತ್ರನು, ಆ ಆರು ಜನ ಯೆಹೂದ್ಯ ಕ್ರೈಸ್ತರ ಕಡೆಗೆ ತಿರುಗಿ ನೋಡಿ, ಅನ್ಯರು ಅನ್ಯ ಭಾಷೆಯಲ್ಲಿ ಮಾತನಾಡುವದನ್ನು ಕೇಳಿ ಆಶ್ಚರ್ಯಗೊಂಡ ಅವರು, "ನಮ್ಮ ಹಾಗೆಯೇ ಪವಿತ್ರಾತ್ಮವರವನ್ನು ಹೊಂದಿದ ಇವರಿಗೆ ನೀರಿನ ದೀಕ್ಷಾಸ್ನಾನವಾಗದಂತೆ ಯಾರಾದರೂ ಅಭ್ಯಾಂತರ ಮಾಡಾರೆ?" (10:47). ಕೊರ್ನೇಲ್ಯನನ್ನು ಮತ್ತು ಅವನ ಮನೆಯವರನ್ನು ಅಂಗೀಕಾರ ಮಾಡಲು ಪೇತ್ರನು ಅವನ ಜೊತೆಯಲ್ಲಿದ್ದವರು ಅವನಿಗೆ ಮತ ನೀಡಬೇಕೆಂದು ಬಯಸಲಿಲ್ಲ. ಅದು ಉತ್ತರವನ್ನು ಹೊಂದಿದ್ದ ಅಲಂಕಾರಿಕ ಪ್ರಶ್ನೆಯಾಗಿತ್ತು: ದೇವರನ್ನು

ವಿರೋಧಿಸದೇ, ಅವರಿಗೆ ದೀಕ್ಷಾಸ್ನಾನದ ನಿರಾಕರಣೆ ಮಾಡಲು ಅಸಾಧ್ಯ! ಆರು ಜನರ ಪ್ರತಿಕ್ರಿಯೆಗಾಗಿ ಅವನು ಕಾಯಲಿಲ್ಲ, ಅವರು ಪ್ರತಿಕ್ರಿಯಿಸಲೂ ಇಲ್ಲ. ಮುಂದಾಗುವಂತಂಹ ಸಂಗತಿಗೆ ಅವರು ಸಹ ಹೊಣೆಗಾರರಾಗಿದ್ದರು.

ಪೇತ್ರನು ಮುಗುಳುನಗುತ್ತಾ ಅವನ ಬಾಹುಗಳನ್ನು ವಿಸ್ತಾರವಾಗಿಸಿ ಕೊರ್ನೇಲ್ಯನ ಮತ್ತು ಅವನ ಸ್ನೇಹಿತರ ಕಡೆಗೆ ತಿರುಗಿದನು. ಅವರು ರಕ್ಷಿಸಲ್ಪಡಬೇಕಾದ ಮಾತುಗಳನ್ನು ಹೇಳಲು ಪೇತ್ರನು ಕಳುಹಿಸಲ್ಪಟ್ಟಿದ್ದನು (11:14); ಈಗ, ಅವನು ಆ ಮಾತುಗಳನ್ನು ಹೇಳಿ ಮುಗಿಸಿದ್ದನು.[66] ನೀವು ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಅಪ್ಪಣೆಕೊಟ್ಟನು (10:48ಎ). ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ *ಹೆಸರಿನ* ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಪೇತ್ರನು ತಿಳಿಸಿದನು (10:43; ಒತ್ತಿ ಹೇಳಿದ್ದು ನನ್ನದು). ಈಗ ಕೊರ್ನೇಲ್ಯನು ಮತ್ತು ಅವನ ಮನೆಯವರು "ಯೇಸು ಕ್ರಿಸ್ತನ *ಹೆಸರಿನಲ್ಲಿ* ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕಾಯಿತು."

ಕೊರ್ನೇಲ್ಯನು ಮತ್ತು ಅವನ ಮನೆಯವರು ಏಕೆ ದೀಕ್ಷಾಸ್ನಾನ ಮಾಡಿಸಿಕೊಂಡರು? ಸಭೆಯ ಚರಿತ್ರೆಯನ್ನು ಅರಿಯದವರು ಅದರ ದೀಕ್ಷಾಸ್ನಾನದ ಕುರಿತು (1) ಅವರು ಈಗಾಗಲೇ ರಕ್ಷಿಸಲ್ಪಟ್ಟಿದ್ದರು ಮತ್ತು (2) ಅವರು ಸಭೆಯ ಸದಸ್ಯರೂ ಕೂಡ ಆಗಿದ್ದರು. ದೀಕ್ಷಾಸ್ನಾವನ್ನು ಈ ರೀತಿಯಾಗಿ ಪರಿಗಣಿಸುವವರು, ಸಭೆಯು ರಕ್ಷಿಸಲ್ಪಟ್ಟವರ ದೇಹವಾಗಿದೆ ಎಂದು ಮರೆತಿರುವರು;[67] ದೀಕ್ಷಾಸ್ನಾನವು ಸ್ವಾಭಾವಿಕವಾಗಿ, ಅವರನ್ನು ಸಭೆಯ ಸದಸ್ಯರನ್ನಾಗಿ ಮಾಡುವದು. ರಕ್ಷಿಸಲ್ಪಟ್ಟು ಸಭಾಸದಸ್ಯರಾಗುವದು ಒಂದೇ ಪ್ರಗತಿಯಾಗಿರುತ್ತದೆ ವಿನ, ಎರಡಾಗಿರುವದಿಲ್ಲ.

ಕೊರ್ನೇಲ್ಯನ ದಿಕ್ಷಾಸ್ನಾನದ ಉದ್ದೇಶವನ್ನು ಪೇತ್ರನ ಮಾತುಗಳಲ್ಲಿ ವಿವರಿಸಲಾಗಿದೆ, "ದೇವರು ಪಕ್ಷಪಾತಿಯಲ್ಲ" (10:34). ಅಪೊಸ್ತಲರ ಕೃತ್ಯಗಳು 2ರಲ್ಲಿ ಯೆಹೂದ್ಯರು ಸ್ನಾನಮಾಡಿಕೊಂಡ ಉದ್ದೇಶವನ್ನೇ, ಅಪೊಸ್ತಲರ ಕೃತ್ಯಗಳು 10ರಲ್ಲಿ ಅನ್ಯರು ಸಹ ಹೊಂದಿರುವರು: (1) ಪಾಪದ ಪರಿಹಾರಕ್ಕಾಗಿ, (2) ಪರಿಶುದ್ಧಾತ್ಮನನ್ನು ವರವಾಗಿ ಪಡೆಯುವದಕ್ಕೆ ಮತ್ತು (3) ಕರ್ತನ ಸಭೆಗೆ ಸೇರಲ್ಪಡುವದಕ್ಕಾಗಿ (2:38, 41, 47).[68]

ಪೇತ್ರನು ನಂಬಿಕೆಯ ಅಗತ್ಯತೆಯನ್ನು ಮಾತನಾಡಿದ ತಕ್ಷಣ (ವಚನ 43), ದೀಕ್ಷಾಸ್ನಾನದ ಅಪ್ಪಣೆಯನ್ನು ನೀಡಿದನು (ವಚನ 48) ಅದು ಯೇಸುವಿನ ಮಾತುಗಳಿಗೆ ಹೊಂದಿಕೆಯಾಗಿದೆ: "ನಂಬಿ *ದೀಕ್ಷಾಸ್ನಾನ* ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು" (ಮಾರ್ಕ 16:16ಎ; ಒತ್ತಿ ಹೇಳಿದ್ದು ನನ್ನದು). ಈ ದೃಷ್ಟಾಂತದ ಪೂರ್ಣ ವಿವರಣೆಯನ್ನು ಪೌಲನು ಗಲಾತ್ಯ ಪತ್ರಿಕೆಯಲ್ಲಿ ತಿಳಿಸಿ: "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ." ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ. ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ *ಒಂದೇ* ಆಗಿರುವದರಿಂದ ಯೆಹೂದ್ಯನು *ಗ್ರೀಕನು ಎಂದೂ, ಆಳು ಒಡೆಯ ಎಂದೂ,* ಗಂಡು ಹೆಣ್ಣು ಎಂದೂ ಭೇದವಿಲ್ಲ (ಗಲಾತ್ಯ 3:26-28; ಒತ್ತಿ ಹೇಳಿದ್ದು ನನ್ನದು).

ಪಂಚಾಶತ್ತಮ ದಿನದಲ್ಲಿ ದೀಕ್ಷಾಸ್ನಾನ ಹೊಂದಿದವರ ಸಂಖ್ಯೆಗಿಂತಲೂ, ಕೈಸರೈಯ ಚರಿತ್ರೆಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡು ಕೊರ್ನೇಲ್ಯನ ಮತ್ತು ಅವನ ಕುಟುಂಬದವರ ಸಂಖ್ಯೆಯು ಕಡಿಮೆಯಾಗಿತ್ತು, ಆದಾಗ್ಯೂ ಪೇತ್ರನಿಂದ ವಾಕ್ಯವನ್ನು ಕೇಳಿ, ಯೇಸುವಿನಲ್ಲಿ ಒಂದಾದವರಿಗೆ, ಆ ಸಂದರ್ಭವು ಆನಂದಕರವಾಗಿತ್ತು! ಅವರೆಲ್ಲರೂ ದೀಕ್ಷಾಸ್ನಾನ ಮಾಡಿಸಿಕೊಂಡರು ಎಂಬುದು ವಿಶೇಷವಾದದ್ದು: ಇದು ಸತ್ಯವಾಗಿದ್ದರೆ, ಈ ಅಪೊಸ್ತಲಕೃತ್ಯದ ಈ ಭಾಗದಲ್ಲಿ ಮಾತ್ರ ಪೇತ್ರನ ವಾಕ್ಯ ಕೇಳಿದವರೆಲ್ಲರೂ ದೀಕ್ಷಾಸ್ನಾನಮಾಡಿಸಿಕೊಂಡರು ಎಂದು ನೋಡುತ್ತೇವೆ![69]

ಕಥೆಯು ಈ ಮಾತುಗಳಿಂದ ಅಂತ್ಯಗೊಳ್ಳುತ್ತದೆ: "ಅವನನ್ನು ಇನ್ನೂ ಕೆಲವು ದಿವಸ

ಇರಬೇಕೆಂದು ಬೇಡಿಕೊಂಡರು'' (10:48ಬಿ). ಆ ಹೊಸ ಕ್ರೈಸ್ತರು ಇನ್ನೂ ಹೆಚ್ಚಾಗಿ ಅರಿಯುವದಕ್ಕೆ ಆಶೆಪಟ್ಟರು. ಪೇತ್ರನು ಅದನ್ನು ಈಡೇರಿಸಿದನು.[70] ಸುವಾರ್ತೆಯನ್ನು ಸಾರಿದ ನಂತರ, ಸ್ನಾನಮಾಡಿಸಿರಿ ಎಂದು ಯೇಸು ಹೇಳಿರಲಿಲ್ಲವೇ? ಆತನ ಅಪ್ಪಣೆಗಳನ್ನು ಅವರು ಎಲ್ಲರಿಗೂ ತಿಳಿಸಬೇಕಿತ್ತಲ್ಲವೇ (ಮತ್ತಾಯ 28:19, 20)? ಹೇಗೂ, ವಿಸ್ತರಣೆಯ ಬೋಧನೆಗಿಂತಲೂ, ಅಧಿಕವಾದದ್ದು ಅನ್ಯೋನ್ಯತೆಯಾಗಿತ್ತು. ಯೆಹೂದ್ಯರೆ ಮತ್ತು ಅನ್ಯರ ಅನೋನ್ಯತೆ ಇನ್ನೂ ಭದ್ರವಾಗಿರಲಿಲ್ಲ; ಅದು ಬಲಗೊಳ್ಳುವ ಅಗತ್ಯತೆಯಿತ್ತು. ಪೇತ್ರನು ಕೊರ್ನೇಲ್ಯನ ಸಂಗಡ ಅನ್ಯೋನ್ಯತೆಯ ಬಲವಾದ ಹೆಜ್ಜೆಯನ್ನು ಇಟ್ಟಿದ್ದನು. ಅವರ ಮನೆಯಲ್ಲಿ ಅನೇಕ ದಿವಸಗಳ ಕಾಲ ತಂಗಿದ್ದನು - ಹಾಗೂ ಅನ್ಯರ ಆಹಾರವನ್ನೇ ಸೇವಿಸಿದನು! (ನೋಡಿರಿ 11:3.) ಮೊದಲ ಸಾರಿ ಅವನು ತನ್ನ ಊಟದಲ್ಲಿ ಹಂದಿಯ ಮಾಂಸವನ್ನು ಸೇವಿಸಿರಬಹುದು! ಒಂದು ವೇಳೆ ಆ ಊಟವು ಅವನಿಗೆ ವಾಕರಿಕೆಯನ್ನು ತಂದಿರಬಹುದು - ಆದರೆ ಅದನ್ನು ಊಟ ಮಾಡುವದರಲ್ಲಿ ಯಶಸ್ವಿಯಾದನು! ಯೆಹೂದ್ಯರ ಮತ್ತು ಅನ್ಯರ ನಡುವಿನ ಅಡಚಣೆಯು ಕಡಿಮೆಯಾಯಿತು![71]

## ಮುಕ್ತಾಯ

ಕೊರ್ನೇಲ್ಯನ ಪರಿವರ್ತನೆಯ ಕುರಿತು ಓದುವಾಗ ಅದರಲ್ಲಿ ಒಳಗೊಂಡಿದ್ದ ಗುರುತರವಾದ ಅದ್ಭುತವನ್ನೆ ಅವಲಂಬಿಸಬೇಡಿ. ಪ್ರತಿ ಪರಿವರ್ತನೆಯು ವಿಶಿಷ್ಟವಾದ ಮತ್ತು ಅಗತ್ಯವುಳ್ಳ ಸಂದರ್ಭವನ್ನು ಒಳಗೊಂಡಿರುತ್ತದೆ. ಈ ವಿಷಯದಲ್ಲಿ ಆಕಸ್ಮಿಕವಾದ ವಿವರಣೆಗಳು ವಿಶಿಷ್ಟವಾಗಿವೆ, ಅಗತ್ಯತೆಗಳು ಪರಿವರ್ತನೆಯ ಮೂಲವಾಗಿರುತ್ತದೆ. ಅದು ರಕ್ಷಣೆಗೆ ಅವಶ್ಯವಾಗಿರುತ್ತದೆ. ಅಗತ್ಯೆಗಳು ಒಂದೇ ಆಗಿದ್ದರೂ ಪ್ರತಿ ಪರಿವರ್ತನೆಯಲ್ಲಿ ಆಕಸ್ಮಿಕಗಳು ಬೇರೆಯಾಗಿರುತ್ತದೆ.[72] ದೇವರು "ಪಕ್ಷಪಾತಿಯಲ್ಲ," ಅತನು "ಬೇಧಬಾವ ಮಾಡುವವನಲ್ಲ" ಮನುಷ್ಯರಲ್ಲಿ ತಾರತಮ್ಮ ಮಾಡುವವನಲ್ಲ (10:34; 15:9). ಕೊರ್ನೇಲ್ಯನು ಮತ್ತು ಅವನ ಸ್ನೇಹಿತರ ರಕ್ಷಣೆಯು, ಹಿಂದೆ ಜನರಲ್ಲಿ ಉಂಟಾದ ರಕ್ಷಣೆಯಂತೆಯೂ, ಮತ್ತು ಅವರ ರಕ್ಷಣೆಯು ನಂತರದ ಜನರಿಗುಂಟಾದ ರಕ್ಷಣೆಯಂತೆಯು ಇರುತ್ತದೆ. ಅವರು ನಂಬಬೇಕಿತ್ತು (10:43; 15:11),[73] ಮಾನಸಾಂತರ ಪಡಬೇಕಿತ್ತು (11:8), ಮತ್ತು ದೀಕ್ಷಾಸ್ನಾನ ಹೊಂದಬೇಕಿತ್ತು. (10:48) ಈ ರೀತಿಯಾಗಿ ಅವರು ದೇವರ ಕೃಪೆಯಿಂದ ರಕ್ಷಿಸಲ್ಪಡಬಹುದು!

ನಿನ್ನ ಕರ್ತನಿಗೆ *ನೀನು* ಒಳಗಾಗದಿದ್ದರೆ, ಏಕೆ ಅದನ್ನು ಈಗ ಮಾಡಬಾರದು?

---

ಟಿಪ್ಪಣೆಗಳು

[1]ಪಂಚಾಶತ್ತಮ ದಿನದಂದು ಪರಿವರ್ತನೆಗೊಂಡ ಯೆಹೂದ್ಯರ ಎರಡನೆಯ ದೊಡ್ಡ ಘಟನೆ (1 ಅದ್ಯಾಯ, 47 ವಚನಗಳು) ಕೊರ್ನೇಲ್ಯನ ಪರಿವರ್ತನೆಯ ಬಗ್ಗೆ ಒಂದೂ ಪೂರ್ತಿ ಅಧ್ಯಾಯ (48 ವಚನಗಳು) ಮುಂದಿನ ಅಧ್ಯಾಯದಲ್ಲಿ ಈ ಕಥೆಯನ್ನು ಮುಂದುವರಿಸಲಾಗಿದೆ (18 ವಚನಗಳು) ಪೌಲನ ಪರಿವರ್ತನೆಯು ಕೇವಲ 19 ವಚನಗಳಲ್ಲಿ ಅಧ್ಯಾಯ 9ರಲ್ಲಿ ತಿಳಿಸಲಾಗಿದೆ. 22 ಮತ್ತು 26ನೇ ಅಧ್ಯಾಯದಲ್ಲಿ ಪುನರಾವರ್ತನೆಗೊಂಡಿ ದ್ದರೂ ಒಟ್ಟು 38 ವಚನಗಳನ್ನು ಮಾತ್ರ. [2]ಒಂದು ವಿಷಯವನ್ನು 2 ಸಾರಿಗಿಂತಲೂ ಹೆಚ್ಚಾಗಿ ತಿಳಿಸಲಾಗಿದೆ (ಕೊರ್ನೇಲ್ಯನಿಗೆ ದೇವದೂತನು ಕಾಣಿಸಿಕೊಂಡದ್ದು) ಪೌಲನು ಪರಿವರ್ತನೆಗೊಂಡ ಬಗ್ಗೆ ಪುನ ತಿಳಿಸಿದ್ದರೂ ಅನೇಕ ಅಧ್ಯಾಯಗಳ ನಂತರ ತಿಳಿಸಲಾಗಿದೆ. [3]ಸಿ. ಬ್ರೂಸ್‌ವೈಟ್. [4]ಲಂಚವು ರೋಮಾಯರ ಸೈನ್ಯದಲ್ಲಿ ಜೀವನ ಶೈಲಿಯಾಗಿತ್ತು, ಕೊರ್ನೇಲ್ಯನ್ನು ಆ ವಿಧವಾದ ಭ್ರಷ್ಟಾಚಾರದಿಂದ ಹೊರತಾಗಿದ್ದನು. [5]NASBಯಲ್ಲಿ "ಯೆಹೂದ್ಯ ಜನರು, ಎಂಬುದಾಗಿದ್ದರೂ," "ಯೆಹೂದ್ಯ" ಎಂಬ ಪದವನ್ನು ತರ್ಜುಮೆಗಾರರು ನೀಡಿರುವರು. ಅಪೊಸ್ತಲರಕೃತ್ಯದಲ್ಲಿ ಜನರು ಎಂಬುದು ಯೆಹೂದ್ಯರಿಗಾಗಿ ಹೇಳಲಾಗಿದೆ. ಕೊನೇರ್ಲ್ಯನು ಯೆಹೂದ್ಯರಿಗೆ ಸಾಕಷ್ಟು ಸಹಾಯ ಮಾಡಿದ್ದನು (ವಚನ 22). ಬಹುಶಃ ಸಹಾಯದ ಅಗತ್ಯತೆಯಿದ್ದ ಅನ್ಯ ಜನರಿಗೂ ಸಹಾಯಮಾಡಿದ್ದನು NIVಯಲ್ಲಿ ಅವನು ಕೊರತೆವುಳ್ಳವರಿಗೆ

ಉದಾರವಾಗಿ ನೀಡಿದನು ಎಂಬುದಾಗಿದೆ. [6]ಲೂಕ 7:2-5ರ ಶತಾಧಿಪತಿಗೆ, ಕೊರ್ನೇಲ್ಯನನ್ನು ಹೋಲಿಸಿರಿ. [7]"ಅವನಿಗೆ ಅಗತ್ಯವಿರುವದು ಸುನ್ನತಿ" ಎಂಬುದಾಗಿ ಯೆಹೂದ್ಯರು ಹೇಳಬಹುದಿತ್ತು! [8]ಪೇತ್ರನ ಬರೋಣದ ಕುರಿತಾಗಿ, ಒಬ್ಬ ಸೇವಕನು ಮುಂದಾಗಿ ಹೋಗಿ ತಿಳಿಸಿದನು ಎಂದು ಪಾಶ್ಚಿಮಾತ್ಯ ಸಾಹಿತ್ಯವು ಹೇಳುತ್ತದೆ. [9]ಕೊರ್ನೇಲ್ಯನು ಯೋಪ್ಪಕ್ಕೆ ಜನರನ್ನು ಕಳುಹಿಸಿದ ನಂತರ, ತನ್ನವರನ್ನು ಕರೆದು ಸೇವಕನು ಬರುವವರೆಗೆ ಪ್ರಾರ್ಥನೆಯಲ್ಲಿ ಸಿದ್ಧರಾಗಿರಬಹುದು. [10]NIVಯಲ್ಲಿ "ಅವನು ಗೌರವದಿಂದ ಅವನ ಪಾದಕ್ಕೆ ಬಿದ್ದನು" ಎಂಬುದಾಗಿದೆ.

[11]ASVಯಲ್ಲಿನ "ಆರಾಧನೆ" ಎಂಬ ಗ್ರೀಕ್ ಪದವನ್ನು ನೋಡಿರಿ 10:25ರಲ್ಲಿ "ಗೌರವ" ಎಂಬ ಮೂಲಪದವಿದೆ: ಎಫೆಸ 5:33 (ಹೆಂಡತಿಯು ಗಂಡನನ್ನು ಸನ್ಮಾನಿಸಬೇಕು). [12]ಶತಾಧಿಪತಿಯು ಪಾಲಿಸ್ತೇನಿನ ಸೈನ್ಯದ ಒಂದು ಭಾಗ. [13]ಕೊರ್ನೇಲ್ಯನು "ನಮಸ್ಕಾರ" ಮಾಡಿದಕ್ಕೆ ಪೇತ್ರನು ಕಾರಣವನ್ನು ಕೇಳಲಿಲ್ಲ. "ನಾನು ದೇವರ ಪ್ರತಿನಿಧಿಯಾಗಿರುವದರಿಂದ, ಇದು ಸರಿ ಎಂದು ಹೇಳದೆ ಎಳಪ್ಪ ಎಂದು ಹೇಳಿದನು. [14]ಪ್ರಕಟನೆ 19:10; 22:8, 9 ನೋಡಿರಿ. ನಾನು ರೋಮಾಪುರವನ್ನು ಸಂಧಿಸಿ, ಪೇತ್ರನ ಕಂಚಿನ ಪ್ರತಿಮೆಯನ್ನು ನೋಡಿರುವೆನು, ಜನರು ಅವನ ಹೆಬ್ಬೆರಳಿಗೆ ಮುತ್ತನ್ನು ನೀಡಿರುವದರಿಂದ, ಅದು ಸವೆದು ಹೋಗಿದೆ. ದೇವರಿಗೆ ನೀಡುವಂತ ಗೌರವವನ್ನು ಯಾವುದಾದರು ಪ್ರಸಂಗಿಯು ಹೊಂದುವದಾದರೆ ಅವನು ಪೇತ್ರನಂತೆ ಅದನ್ನು ನಿರಾಕರಿಸಬೇಕು. ಸಭೆಯಲ್ಲಿ ಪೇತ್ರನು "ಉನ್ನತ ಸ್ಥಾನವನ್ನು" ಹೊಂದಿದ್ದನು. ಅದು ಎಲ್ಲರಿಗಿಂತಲೂ ಉತ್ತಮವಾದ ಅಪೊಸ್ತಲನ ಸ್ಥಾನವಾಗಿತ್ತು - ಆದಾಗ್ಯೂ ಕೊರ್ನೇಲ್ಯನು ಅವನ ಮುಂದೆ ಬಾಗುವದನ್ನು ನಿರಾಕರಿಸಿದನು. [15]ಜಿಮ್ಮಿ ಅಲನ್. [16]ಬರ್ನಾಡ್ ಯಂಗ್‌ಮ್ಯಾನ್. [17]ವಚನ 28ರಲ್ಲಿ ಬಹಶ ಅನ್ಯರ ಲಾಭಕ್ಕಾಗಿ ಆರು ಜನ ಯೆಹೂದ್ಯ ಕ್ರೈಸ್ತರು ಜೊತೆಯಲ್ಲಿ ಬಂದಿರಬಹುದು. ಅಲ್ಲಿ ಸೇರಿದವರು ಸಹ ಕೊರ್ನೇಲ್ಯನನಂತೆ ಭಯಭಕ್ತಿವುಳ್ಳವರು ಮತ್ತು ಯೆಹೂದ್ಯ ಸಭಾಮಂದಿರಕ್ಕೆ ಹೋಗುವವರು ಆಗಿರಬಹುದು. ಅವರು ಯೆಹೊದ್ಯರ ಧರ್ಮಶಾಸ್ತ್ರವನ್ನು ಹಾಗೂ ಅವರ ಸಂಪ್ರದಾಯವನ್ನು ಅರಿತ್ತಿದ್ದರು. [18]"ಅನ್ಯ" ಎಂಬ ಪದವನ್ನು ಸೆಪ್ಟಜೂಯಂಟ್‌ನಲ್ಲಿ ಬಳಸಲಾಗಿದೆ. ಸುನ್ನತಿಯಿಲ್ಲದ ಫಿಲಿಪ್ಪಿಯರಿಗೆ ಹೇಳಲಾಗಿದೆ, ತಾರತಮ್ಯವನ್ನು ಗೆಲ್ಲಲು ಈ ಪದ ಪ್ರಯೋಗವಾಗಿರಬಹುದು. [19]KJVಯಲ್ಲಿ "ವಿರುದ್ಧವಾಗಿ ಮಾತನಾಡಬಾರದು" ಎಂದು ಬಳಸಲಾಗಿದೆ. ಪೇತ್ರನು "ಉತ್ತರ ಹೇಳದೆ" ಹಿಂದಿರುಗಿದನು. [20]ಯೆಹೂದ್ಯರ ಲೆಕ್ಕದ ಪ್ರಕಾರ, ಭಾಗದ ಒಂದು ಭಾಗವು ಪೂರ್ಣವಾದದ್ದಾಗಿತ್ತು. ದೇವದೂತನು ಕಾಣಿಸಿಕೊಂಡ ಮೊದಲನೆಯ ದಿನವಾಗಿತ್ತು. ಪೇತ್ರನು ಎರಡನೆಯ ದಿನದಲ್ಲಿ ದರ್ಶನವನ್ನು ಕಂಡನು. ಮೂರನೆಯ ದಿನದಲ್ಲಿ ಪೇತ್ರ ಮತ್ತು ಅವನ ಸಹಚರರು ಪ್ರಯಾಣ ಬೆಳೆಸಿದರು. ಅವರು ನಾಲ್ಕನೆಯ ದಿನದಲ್ಲಿ ಕೈಸರೆಯನ್ನು ತಲುಪಿದರು.

[21]"ಬಾಯಿ ತೆರೆದನು" ಎಂಬುದು ವಿಚಿತ್ರವಾಗಿದೆ (ಬಾಯಿ ಮುಚ್ಚಿಕೊಂಡು ಮಾತನಾಡುವದು ಅಸಾಧ್ಯ) "ಬಾಯಿ ತೆರೆದನು" ಪ್ರಮುಖ ಮಾತನ್ನು ಹೇಳುವಾಗ ಬಳಸಲಾದ ಪದವಾಗಿದೆ. [22]"ಮುಖಬೆಲೆ" 10:34ರ ನಕರಾತ್ಮಕವಾದ ಗ್ರೀಕ್ ಪದವಲ್ಲ. [23]1 ಪೇತ್ರ 1:17 "ನಾವು ದೇವರನ್ನೇ ಅನುಸರಿಸಬೇಕು" (ಯಾಕೋಬ 2:1-13). [24]ಆಮೋಸ 9:7 ಮತ್ತು ಮೀಕ 6:8. [25]"ಸ್ವಾಗತ" ಎಂಬುದು ಒಪ್ಪುವಿಕೆ. [26]ಲೂಕನಿಂದ ಬರೆಯಲ್ಪಟ್ಟ ಸಂದೇಶವನ್ನು ಒಂದು ನಿಮಿಷದಲ್ಲಿ ಓದಿ ಮುಗಿಸಬಹುದು. ಲೂಕನು ಅದನ್ನು ಸಂಕ್ಷಿಪ್ತವಾಗಿ ಬರೆದನು, 36 ರಿಂದ 38ರ ಅರಮಾಯದ ಹೇಳಿಕೆಯನ್ನು ಲೂಕನು ಬರೆದಿರುವದಿಲ್ಲ ಎಂಬುದು ಕೆಲವರ ಅಭಿಪ್ರಾಯ. ಅದು ಪೇತ್ರನ ಸಂಕ್ಷಿಪ್ತ ವರದಿ. [27]ಯೆಹೂದ್ಯರಿಗೆ ಬೋಧಿಸುವದಕ್ಕಿಂತಲೂ, ಅನ್ಯರಿಗಾಗಿ ಯೇಸುವಿನ ಚರಿತ್ರೆಯನ್ನು ಹೇಳಲು ಪೇತ್ರನು ಹೆಚ್ಚು ಸಮಯ ತೆಗೆದುಕೊಂಡನು. [28]"ಇಸ್ರಾಯೇಲ್ ಮಕ್ಕಳಿಗಾಗಿ" ಕಳುಹಿಸಲ್ಪಟ್ಟವನು ಎಂಬದೆ (ಯೆಹೂದ್ಯರು). [29]ಎಫೆಸ 2:17. [30]ಇದರಲ್ಲಿ ಅನ್ಯರು ಒಳಗೊಂಡಿರುವರು.

[31]ಅವರು ಯೇಸುವನ್ನು ಅರಿತಿದ್ದರು ಎಂದು, ಅವನು ಕಳುಹಿಸಿದ ಸೇವಕರ ಮೂಲಕ ಪೇತ್ರನು ತಿಳಿದಿರಬಹುದು, ಅಥವಾ ಅವರು ಆಜ್ಞಾನವನು (1) ಅವರು ಯೆರುಸಲೇಮಿನಿಂದ 70 ಮೈಲುಗಳ ಅಂತರದಲ್ಲಿದ್ದರಿಂದ ಕಲಿತರು, (2) ಯೇಸು ಅಲ್ಲಿ ಬಹಳವಾಗಿ ಸಂಚರಿಸಿದ್ದನು, (3) ಫಿಲಿಪ್ಪನು ಅಲ್ಲಿ ಪ್ರಸಂಗಿಸಿದ್ದನು ಯೇಸು ಮಾಡಿದ ಕೆಲವು ಕಾರ್ಯಗಳನ್ನು ತಿಳಿದಿರಬಹುದು, ಆದರೆ ಪೇತ್ರನು ಇನ್ನೂ ಹೆಚ್ಚಾಗಿ ತಿಳಿಸುವದಕ್ಕಿದ್ದನು. [32]"ಯೂದಾಯವು" ಪಾಲಿಸ್ತೇನನ್ನು ಅಕ್ರಮಿಸಿತ್ತು. [33]ಮಾರ್ಕನ ಸುವಾರ್ತೆಯ ಮುಖ್ಯಾಂಶಗಳನ್ನು ಪೇತ್ರನು ಕೊರ್ನೇಲ್ಯನನಿಗೆ ಬೋಧಿಸಿದ್ದನು. (ಪೇತ್ರನ ಸುವಾರ್ತೆಯನ್ನು ಮಾರ್ಕನು ಬರೆದಿರುವನು.) ಯೋಹಾನನ ದೀಕ್ಷಾಸ್ನಾನದಿಂದ ಪೇತ್ರನ ಪ್ರಸಂಗವು ಪ್ರಾರಂಭವಾಗುತ್ತದೆ (ಮಾರ್ಕನು ಅದನ್ನೇ ಮಾಡಿರುವನು) ನಂತರ ಯೇಸುವಿನ ಪುನರುತ್ಥಾನಕ್ಕೆ ಮುಂದುವರೆದನು (ಮಾರ್ಕನಲ್ಲಿರುವಂತೆ). ಹೋಲಿಕೆಯನ್ನು ಒತ್ತಿ ಹೇಳಲಾಗುವದಿಲ್ಲ, ಮಾರ್ಕನಲ್ಲಿ ಪುನರುತ್ಥಾನದ ವಿಷಯವನ್ನು ನೋಡುವದಿಲ್ಲ. ಆದರೆ ಯೇಸು ಶಿಷ್ಯರೊಂದಿಗೆ ಊಟಮಾಡಿದನು,

ಮತ್ತು ಪಾನ ಮಾಡಿದನು - ಅಪೊಸ್ತಲರಕೃತ್ಯ 10ರಲ್ಲಿ ಪೇತ್ರನು ಮಾಹಿತಿ ನೀಡಿರುವನು. [34]ದೇವರು ಯೇಸುವನ್ನು ಅಭಿಷೇಕಿಸಿದನು, ಯೋಹಾನನಿಂದ ಸ್ನಾನ ಮಾಡಿಸಿಕೊಂಡನು (ಲೂಕ 3:21, 22; 4:18, 19) "ಅಭಿಷೇಕಿಸಿದನು" ಅಂದರೆ "ಮೆಸ್ಸೀಯನನ್ನಾಗಿ ಮಾಡಿದನು" ಎಂಬದೆ. [35]ಯೇಸುವಿನ ಕುರಿತ ಸಂದೇಶ ಮಾತ್ರ (ಮಾರ್ಕನಲ್ಲಿರುವಂತೆ), ಮಾತನಲ್ಲ, ಕ್ರಿಯೆಯನ್ನು ಯೇಸುವಿನ ಬೋಧನೆ ಯಷ್ಟೆ. ಆತನ ಕಾರ್ಯಗಳು ಪ್ರಮುಖವಾಗಿದ್ದವು. (ಶಿಲುಬೆಯ ಮರಣ) ರಕ್ಷಿಸುತ್ತಾನೆ, ಪ್ರತಿರೋಗಿ ಯನ್ನು ಗುಣಪಡಿಸುತ್ತಾನೆ. "ಪ್ರತಿ" ಎಂಬುದು ಎಲ್ಲರನ್ನು ಗುಣಪಡಿಸಲುಪ್ರಯತ್ನಿಸಿದನು. [37]ಕೆಲವಾರು ರೋಗಗಳು ಸೈತಾನನಿಂದಲೂ ಉದ್ಭವಿಸುತ್ತವೆ (ಲೂಕ 13:16; 2 ಕೊರಿಂಥ 12:7; ಯೋಬನ ಪುಸ್ತಕ) ಪ್ರತಿರೋಗವು ಸೈತಾನನಿಂದ ಬರುತ್ತದೆ ಎಂಬ ಅರ್ಥವಲ್ಲ, ರೋಗದಲ್ಲಿ ಅರ್ಥವಿಲ್ಲ ಎಂಬುದಾಗಿಯೂ ಇರುವದಿಲ್ಲ (ಕೀರ್ತನೆ 119:67, 71). "ಸೈತಾನನಿಂದ ಬಾಧೆಪಟ್ಟವರನ್ನು ಗುಣಪಡಿಸಿದನು" ಸೈತಾನನಿಗೆ ಒಳಪಟ್ಟವರನ್ನು ಆತ್ಮೀಕವಾಗಿ ಗುಣಪಡಿಸುವದು ಎಂಬ ಅರ್ಥ. [38]ಯೋಹಾನ 3:2. [39]ಇನ್ನೊಂದು ಪದದಲ್ಲಿ, "ನೀವು ಈ ವಿಷಯವನ್ನು ಕೇಳಿರುವಿರಿ," ಆದರೆ ನಾವು ಅದನ್ನು ನೋಡಿರುವೆವು ಮತ್ತು ಅದು ಸತ್ಯವಾದದ್ದು. [40]ಅಕ್ಷರಶ "ಮರದ ಮೇಲೆ" (KJV, NIV) (ಧರ್ಮೋಪದೇಶಕಾಂಡ 21:22, 23).

[41]"ಕಾಣಿಸಿತು" ಎಂಬದು ವಾಕ್ಯದ ನೇರವಾದ ಮಾತಾಗಿದೆ. "ಯೇಸುವಿನ ಪುನರುತ್ಥಾನಗೊಂಡ ದೇಹವನ್ನು ದೇವರು ತೋರಿಸದಿದ್ದರೆ, ಸಾಕ್ಷಿಗಳು ಅದನ್ನು ನೋಡಲಾಗುತ್ತಿರಲಿಲ್ಲ. [42]ಆತನು ಪರಿಚಯಸ್ಥರಿಗೆ ಮಾತ್ರ ಕಾಣಿಸಿಕೊಂಡನು ಎಂಬುದು, ಆತನ ಪುನರುತ್ಥಾನದ ಹೇಳಿಕೆಯನ್ನು ಬಲಹೀನಪಡಿಸುತ್ತದೆ. ಆದರೆ ಇನ್ಯಾರು ಆತನ ಪುನರುತ್ಥಾನಕ್ಕೆ ಸಾಕ್ಷಿಯಾಗಬಹುದು? ಹಿಂದೆ - ಆರಿಸಲ್ಪಟ್ಟವರಿಗೆ ಕಾಣಿಸಿದನು ಎಂಬುದು, ಸಾಕ್ಷಿಗಳನ್ನೂ ಅವಲಂಬಿಸಲು ಸಾಧ್ಯವಿಲ್ಲ ಎಂಬ ಹೇಳಿಕೆಯಿದೆ, ಅಥವಾ ಯೇಸುವನ್ನು ನೋಡಿದ್ದೇವೆ ಎಂದು ಹೇಳಿದ್ದರಲ್ಲಿ ಲಾಭವಿದೆ ಎಂಬ ಹೇಳಿಕೆಯು ಇರುತ್ತದೆ. ಯಾವುದು ಸಿದ್ಧಾಂತವಾಗುವದಿಲ್ಲ. [43]ದೈಹೀಕ ಪುನರುತ್ಥಾನವುಒಂದು ದೊಡ್ಡ ಸಾಕ್ಷಿ ಎಂದು ಲೂಕನು ತಿಳಿಸಿರುವನು (ಲೂಕ 24:41-43). ದರ್ಶನದಲ್ಲಿರುವ ಅಥವಾ ದೇಹವಿಲ್ಲದ ಭೂತವು ಮೀನನ್ನು ತಿನ್ನಲು ಸಾಧ್ಯವೇ? [44]ಮತ್ತಾಯ 28:18-20; ಮಾರ್ಕ 16:15, 16, "ಜನರು" ಎಂದರೆ ಅಪೊಸ್ತಲರಕೃತ್ಯದಲ್ಲಿ ಯೆಹೂದ್ಯರು ಎಂಬ ಅರ್ಥವಾಗಿದೆ, ಆದರೆ ಇಲ್ಲಿ "ಎಲ್ಲಾ ಜನರು" ಎಂಬದೆ ಅಂದರೆ "ಯೆಹೂದ್ಯರು ಮತ್ತು ಅನ್ಯರು." [45]ಯೇಸುವನ್ನು ನ್ಯಾಯತೀರಿಸುವವನು ಎಂದು ನಿರ್ದಶಿಸಲಾಗಿದೆ, ಆದರೆ ಅದು ಕಡೆಯ ಮಾತಾಗಿರುವದಿಲ್ಲ (17:31) ಗಮನಿಸಿ 2 ತಿಮೊಥೆ 4:1; 1 ಪೇತ್ರ 4:5. [46]ಹಿಂದಿನ ಸಂದೇಶದಲ್ಲಿ ಬಳಸಿದಂತೆ, ಪೇತ್ರನು ಪ್ರವಾದಿಗಳ ಕುರಿತಾಗಿ ಹೇಳಿರುವನು (ಅಪೊಸ್ತಲರಕೃತ್ಯಗಳು 2; 3). ದೇವ ಭಯವಿದ್ದ ಈ ಜನರು ಆ ಪ್ರವಾದಿಗಳ ಕುರಿತು ಅರಿತಿದ್ದರು. [47]ವಚನ 43ರಲ್ಲಿ "ಆತನ" ಮತ್ತು "ಆತನಿಗೆ" ಎಂದು ಒತ್ತಿ ಹೇಳಲಾಗಿದೆ: ಕ್ರಿಸ್ತನ ಮೂಲಕ ಮಾತ್ರ ರಕ್ಷಣೆ. ಅನ್ಯ ಜಾತಿಗೆ ಸೇರುವವರಿಗೆ, ಅದು ಅವರ ಸಂಸ್ಕೃತಿಯ ಒಂದು ಭಾಗ ಎಂದು ಹೇಳುತ್ತಿದ್ದರು - ನಾವು ಅವರ ಸಂಸ್ಕೃತಿಯನ್ನು ಹಾಳು ಮಾಡಬಾರದು. ಅವರ ಸಂಸ್ಕತಿಯನ್ನು ಪಾಲಿಸುವಂತೆ ಉತ್ತೇಜಿಸಬೇಕು, ಆದರೆ ಧರ್ಮದ ವಿಷಯಕ್ಕೆ ಬರುವಾಗ, ಅನ್ಯರ ಧರ್ಮವು ಎಷ್ಟೇ ಬಣ್ಣಮಯವಾಗಿದ್ದರೂ, ಅದು ಅವರನ್ನು ರಕ್ಷಿಸಲಾರದು, ಯೇಸು ಕ್ರಿಸ್ತನಲ್ಲಿ ಮಾತ್ರ ರಕ್ಷಣೆಯಿದೆ. [48]ಪೇತ್ರನಿಗೆ ಆಶ್ಚರ್ಯವಾಗಿರಬಹುದು. ಯೆಹೂದ್ಯ ಕ್ರೈಸ್ತರು ಈಗ ಪ್ರಮುಖವಾಗಿದ್ದರಿಂದ ಪೇತ್ರನ ಕುರಿತಾಗಿ ಹೇಳಿರುವದಿಲ್ಲ, ಆತ್ಮ ಮತ್ತು ದರ್ಶನವು ಪೇತ್ರನಿಗೆ ಮನವರಿಕೆ ಉಂಟು ಮಾಡಿತ್ತು, ಆತ್ಮನ ಅಭಿಷೇಕದಿಂದ, ಅವನ ಸಂಗಡವಿದ್ದ ಆರು ಜನರಿಗೆ ರುಜುವಾತು ಪಡಿಸಲಾಯಿತು. [49]ದೇವರು ಅನ್ಯರನ್ನು ಅಂಗೀಕರಿಸಿದನು ಎಂಬ ವಿಷಯವು ಅವರಿಗೆ ಉಲ್ಲಾಸವನ್ನು ಉಂಟುಮಾಡಿರಬಹುದು, "ದೇವರಿಗೆ ಸ್ತುತಿ" ಉಂಟು ಮಾಡಿರಲೂ ಬಹುದು. [50]ಅಪೊಸ್ತಲರ ಪುಸ್ತಕ ಒಂದರ 2:38ರ ಟಿಪ್ಪಣಿ ನೋಡಿರಿ.

[51]ಯೇಸು ಇದನ್ನು ಅನೇಕ ಸಾರಿ ಹೇಳಿರುವನು ಎಂದು NASB ಸರಿಯಾದ ತರ್ಜುಮೆಯನ್ನು ಮಾಡಿರುತ್ತದೆ. 1; 4, 5, ಯೇಸು ಹೇಳಿರುವನೆಂಬ ದಾಖಲೆ ಇದೆ; ಇತರೆ ಸಂದರ್ಭಗಳಲ್ಲೂ ಹೇಳಿರಬಹುದು. [52]F. F. ಬ್ರೂಸ್. [53]NIV 10:46 ವಿವಿಧ ಭಾಷೆ ಎಂಬುದಾಗಿದೆ. [54]"ಇನೋಸ್" ಅಂದರೆ ಇದೇ "ವಿಧವಾದ" ಗ್ರೀಕ್ ಪದ, "ಸಮನಾದ" ಎಂಬ ಅರ್ಥ. "ಐನೋಸೆಲೆಸ್ ಟ್ರಯಾಂಗಲ್" (ಸಮನಾದ ಐದು ಮೂಲೆಗಳುಳ್ಳ ತ್ರಿಕೋನ). [55]ಪಂಚಾಶತ್ತಮ ದಿನದಲ್ಲಿ ಉಂಟಾದ, ಅನ್ಯಭಾಷೆಯನ್ನು ಕೇಳುಗರು ಅರ್ಥ ಮಾಡಿಕೊಂಡರು ಎಂಬುದಾಗಿದೆ (2:11; 10:46). [56]ಹವಾರ್ಡ್‌ಮಾರ್ಷಲ್. [57]ವಾರನ್ ವೆರ್ಸ್ಬಿ. [58]ಪರಿಶುದ್ಧಾತ್ಮನ ಬರುವಿಕೆಯು ಕೊರ್ನೇಲ್ಯನ ಹಾಗೂ ಅವನ ಸಂಗಡಿಗರ ಪಾಪವನ್ನು "ಸುಟ್ಟು ಹಾಕಿತು" 15:8, 9. ಆದರೆ ಹೃದಯಗಳು ನಂಬಿಕೆಯಿಂದ ಶುದ್ಧಾವಾದವು ಎಂದು ಈ ಭಾಗದ ವಾಕ್ಯವು ತಿಳಿಸುತ್ತದೆ. [59]ಈ ಹೇಳಿಕೆಗೆ ಅನುಗುಣವಾಗಿ, ಯೋಹಾನ 14:16, 17 ಬಳಸಲಾಗುತ್ತದೆ: "ಪ್ರಪಂಚವು" ಆತ್ಮನನ್ನು ಸ್ವೀಕರಿಸಲು ಸಾಧ್ಯವಿಲ್ಲದೆ ಇದ್ದದ್ದರಿಂದ, ಕೊರ್ನೇಲ್ಯನು

ಅವನ ಸಂಗಡಿಗರು "ಈ ಲೋಕಕ್ಕೆ" ಸಂಬಂಧ ಪಟ್ಟವರಲ್ಲ. "ಪ್ರಪಂಚ" ಎಂಬುದು ಅಪೊಸ್ತಲರ ವಿರೋಧಿ ಎಂದು ಯೋಹಾನ 14 ತಿಳಿಸುತ್ತದೆ. ಅವರ ಹೃದಯಗಳು ಕಠಿಣವಾಗಿದೆ. ಕೊರ್ನೇಲ್ಯನು ಅಪೊಸ್ತಲರ ವಿರೋಧಿ ಯಾಗಿರಲಿಲ್ಲ, ಕಠಿಣವಾದ ಹೃದಯವನ್ನು ಹೊಂದಿರಲಿಲ್ಲ ಯೋಹಾನ 14:17 ಮುಖ್ಯ ವಚನವನ್ನು "ಪ್ರಪಂಚವು ಅವರನ್ನು ನಿನ್ನ ಕೈಯಿಂದ ತೆಗೆಯಲಾರದು" ಎಂಬ ತರ್ಜುಮೆ. [60]ಗ್ರೀಕ್‌ನಲ್ಲಿ "ಕ್ರಮವಾಗಿ" ಎಂಬುದು "ಶಿಸ್ತು ಬದ್ಧ ಕ್ರಮ" ಎಂಬ ಅರ್ಥವಾಗಿದೆ.

[61]KJV ಮತ್ತು NIV ಇದೇ ವಿಧವಾದ ಪದಗಳನ್ನು ಹೊಂದಿರುತ್ತದೆ. [62]ಪವಿತ್ರಾತ್ಮನು ಅವರ ಮೇಲೆ ಬರುವ ಮೊದಲೇ ಕೊರ್ನೇಲ್ಯನು ಮತ್ತು ಅವನ ಸಂಗಡಿಗರು ನಂಬಿಕೆಯನ್ನು ಹೊಂದಿದ್ದರು (11:17). 11:14, 15ರ ಪೇತ್ರನ ಪದವು ಅದರ ಸಾಧ್ಯತೆಯನ್ನು ಹೊಂದಿರುವದಿಲ್ಲ. ದೇವರು ಅನ್ಯರನ್ನು ಅಂಗೀಕರಿಸಿದನು ಎಂಬ ರುಜುವಾತಾಯಿತು. [63]ಪೇತ್ರನು ಸುವಾರ್ತೆ ಸಾರುವದು ದೇವರ ಚಿತ್ತವಾಗಿತ್ತು ಎಯದಕ್ಕೆ ಯಹೂದ್ಯ ಕ್ರೈಸ್ತರ ಸಾಕ್ಷಿಯ ಅಗತ್ಯತೆ ಇತ್ತು. [64]ಬ್ರೂಸ್, 216. [65]ಪ್ರಾಥಮಿಕವಾಗಿ ಅಪೊಸ್ತಲರು ಪವಿತ್ರಾತ್ಮನ ಸ್ನಾನ ಹೊಂದಿದರು ಮತ್ತು ಅವರು ಕೈಗಳನ್ನಿಡುವಾಗ ಇತರರೂ ಸಹ ಹೊಂದಿದರು (8:18). ಸ್ನಾನ ಹೊಂದಿದವರೆಲ್ಲರೂ ಸಾಧಾರಣವಾದ ಆತ್ಮನ "ವರವನ್ನು" ಹೊಂದಿದರು (ಅದ್ಭುತವಲ್ಲದ (2:38) ಈ ವಿಷಯದಲ್ಲಿ ಯೆಹೂದ್ಯರು ಮಾತ್ರ ದೀಕ್ಷಾಸ್ನಾನ ಹೊಂದಿದ್ದರು. [66]ಅವನು ಅವರಿಗೆ ಅಪ್ಪಣೆ ನೀಡಿದನು. KJV ಅದು ಕೊರ್ನೇಲ್ಯನಿಗೂ ಅವನ ಮನೆಯವರಿಗೂ ಅಪ್ಪಣೆಯಾಗಿತ್ತು ಎಂದು ಇತರ ತರ್ಜುಮೆಯಲ್ಲಿ ನೋಡುತ್ತೇವೆ. ಮೂಲ ವಾಕ್ಯದಲ್ಲಿ, ಕೊರ್ನೇಲ್ಯನನ್ನು ಅವನ ಮನೆಯವರನ್ನು ದೀಕ್ಷಾಸ್ನಾನ ಮಾಡಿಸಲು, ಆರ ಜನ ಯೆಹೂದ್ಯ ಕ್ರೈಸ್ತರು ಆಜ್ಞೆಯನ್ನು ಹೊಂದಿದ್ದರು ಎಂಬುದಾಗಿದೆ. ನಿಯಮದ ಪ್ರಕಾರ, ಅಪೊಸ್ತಲರು ತಾವೇ ಜನರನ್ನು ದೀಕ್ಷಾಸ್ನಾನ ಮಾಡಿಸಲಿಲ್ಲ, ಇದರಿಂದ ತಮ್ಮದೇ ಆ ಸಂಘವನ್ನು ಸ್ಥಾಪಿಸಲು ಅವಕಾಶ ನೀಡಲಿಲ್ಲ (1 ಕೊರಿಂಥ 1:14, 15). [67]2:41, 47ರ ಟಿಪ್ಪಣಿ ನೋಡಿರಿ. [68]ಅಪೊಸ್ತಲರ ಕೃತ್ಯ 10ರಲ್ಲಿ ಮನುಷ್ಯರ ರಕ್ಷಣೆಗೆ ದೇವರು "ಹೊಸ ನಿಯಮವನ್ನು" ನೀಡಿದನು ಎಂದು ಕೆಲವರ ಅಭಿಪ್ರಾಯ, 2:38 ನಮಗೆ ಅನ್ವಯಿಸುವದಿಲ್ಲ ಯಾಕೆಂದರೆ, "ಆದಿ ಕ್ರೈಸ್ತರ ಆರಂಭದಲ್ಲಿ ಅದು ಯೆಹೂದ್ಯರಿಗೆ ಮಾತ್ರ ಮೀಸಲಾಗಿತ್ತು" 10:34, 35 ಮತ್ತು 15:9 ಈ ಆಲೋಚನೆಯನ್ನು ಅಲ್ಲಗಳೆಯತ್ತದೆ, ಪ್ರಾರಂಭದಿಂದಲೂ ಇದೇ ರೀತಿಯಾಗಿ, ಎಲ್ಲರೂ ರಕ್ಷಿಸಲ್ಪಡುವರು! [69]ಅವರೆಲ್ಲರೂ ಸ್ನಾನ ಹೊಂದಿದ್ದರೆ, ಲೆಕ್ಕಾಚಾರಕ್ಕೆ ಅವರಲ್ಲಿದ್ದ ಆಶ್ಚರ್ಯವಾದ ಮನೋಭಾವವನ್ನು ನೋಡುತ್ತೇವೆ (10:33)! [70]ವೆಸ್ಟರ್ನ್ ಟೆಕ್ಸ್‌ನಲ್ಲಿ, ಪೇತ್ರನು ಬಹಳಷ್ಟು ದಿವಸ ಕೈಸರೈಯಲ್ಲಿದ್ದನು ಎಂದು ಹೇಳುತ್ತದೆ.

[71]ಅಪೊಸ್ತಲರ ಕೃತ್ಯಗಳು 10ರ ವಾಕ್ಯದಲ್ಲಿರುವಂತೆ, ಅನ್ಯರ ಅಂಗೀಕಾರವು ಪ್ರಶ್ನೆಯು ನಿರಂತರವಾಗಿ ಪರಿಹಾರವಾಗಲಿ ಎಂದು ನಾನು ಆಶಿಸುತ್ತೇನೆ, ಆದರೆ ಅನೇಕರು ಮುಂದಾಗಿ ಹೋಗುವಂತ ನಿರ್ಧಾರವನ್ನು ಮಾಡಿ, ಅನ್ಯರಿಗೆ ಸುವಾರ್ತೆಯನ್ನು ಸಾರುವಂತಾಗಲಿ (11:20). [72]ಅಗತ್ಯತೆಗೆ ಅನುಗುಣವಾಗಿ, ಅಪೊಸ್ತಲರಕೃತ್ಯ 1ರ ಪುಸ್ತಕದಲ್ಲಿ ಪಟ್ಟಿಯನ್ನು ಮಾಡಲಾಗಿದೆ. ಪರಿವರ್ತನೆಯ ಕುರಿತಾಗಿ ಪುನಃ ಪುನಃ ಪುನರಾವರ್ತನೆಯ ಅಗತ್ಯತೆ ಇದೆ. [73]ಹೃದಯದ "ನಂಬಿಕೆಯು" ಆಲೋಚನೆಯು "ತುಟಿಗಳ" ಮೂಲಕ ತೋರ್ಪಡಿಸಲಾಗಿದೆ (ರೋಮಾಪುರ 10:9, 10).

# ದೈವೀಕ ಶಕ್ತಿಯ ಮೂರು ಪ್ರಾಯೋಜನೆಗಳು

ಪರಿಶುದ್ಧಾತ್ಮನು, ತ್ರೈಯೇಕತ್ವದ ಒಬ್ಬ ವ್ಯಕ್ತಿಯಾಗಿರುವನು (ಕೊಲೊಸ್ಸೆ 2:9; KJV) ತಂದೆ ಮತ್ತು ಮಗನ ಸಮಾನತೆಯಲ್ಲಿರುವನು. ಆತನು ದೈವೀಕವಾಗಿದ್ದು, ಆತ್ಮೀಕ ವ್ಯಕ್ತಿತ್ವವನ್ನು ಹೊಂದಿರುವನು. ಆತನನ್ನು "ಇದು" ಎಂಬುದಾಗಿ ಹೇಳಲಾಗುವದಿಲ್ಲ, ಅಥವಾ ಆತನು "ಶಕ್ತಿಯ ತೋರ್ಪಡುವಿಕೆಯಾಗಿರುವದಿಲ್ಲ."

ಪರಿಶುದ್ಧಾತ್ಮನ ಕಾರ್ಯಗಳ ಕುರಿತಾಗಿ ಬೈಬಲಿನಲ್ಲಿ ದಾಖಲುಗಳಿದ್ದರೂ, ಹೊಸ ಒಡಂಬಡಿಕೆಯಲ್ಲಿ "ತ್ರೈಯೇಕತ್ವದ" ಸಿದ್ಧಾಂತದ ಅರ್ಥವನ್ನು ಸ್ಪಷ್ಟವಾಗಿ ನೀಡಿರುವಂತೆ, ಹಳೇ ಒಡಂಬಡಿಕೆಯಲ್ಲಿ ನೀಡಿರವದಿಲ್ಲ. ಹೊಸ ಒಡಂಬಡಿಕೆಯಲ್ಲಿ, ಪರಿಶುದ್ಧಾತ್ಮನು ಯಾವ ರೀತಿ ಯಾಗಿ ಪ್ರತಿಯೊಬ್ಬನಿಗೂ ಶಕ್ತಿಯನ್ನು ನೀಡಿದನು ಎಂದು ಅಭ್ಯಾಸಿಸೋಣ.

ಯೇಸುವಿನ ಕನ್ಯಾಜನನದ ಸಂಬಂಧದಲ್ಲಿ ಉಂಟಾದ ಪರಿಶುದ್ಧಾತ್ಮನ ಕಾರ್ಯಗಳನ್ನು ತಿಳಿಯಲು ಹೆಚ್ಚು ಸಮಯವನ್ನು ವ್ಯಯಿಸಬಹುದು (ಮತ್ತಾಯ 1:20), ಆತನ ದೀಕ್ಷಾಸ್ನಾನ (ಮತ್ತಾಯ 3:16), ಆತನಿಗುಂಟಾದ ಶೋಧನೆ (ಮತ್ತಾಯ 4:1), ಆತನ ವೈಯಕ್ತಿಕವಾದ ಸೇವೆ (ಲೂಕ 4:14; ಮತ್ತಾಯ 12:28), ಆತನ ಮರಣ (ಇಬ್ರಿಯ 9:14), ಇನ್ನೂ ಮುಂತಾದವು. ಯೇಸು ಅಪರಿಮಿತವಾದ ಶಕ್ತಿಯನ್ನು ಹೊಂದಿದ್ದನು, ತನ್ನ ಕೆಲವು ಶಕ್ತಿಯನ್ನು ಇತರರೊಂದಿಗೆ ಹಂಚಿಕೊಂಡನು (ಮತ್ತಾಯ 10:1). ಯೇಸುವಿನ ಮರಣ, ಸಮಾಧಿ ಹಾಗು ಪುನರುತ್ಥಾನದ ನಂತರ ಉಂಟಾದ ಪವಿತ್ರಾತ್ಮನ ಕಾರ್ಯಗಳ ಕುರಿತು ನಮ್ಮ ಪ್ರಾಥಮಿಕ ಚಿಂತೆಯಾಗಿರುತ್ತದೆ - ಅದು ಕ್ರೈಸ್ತರ ಯುಗದಲ್ಲಿ ನಡೆದ ಘಟನೆಗಳಾಗಿರುತ್ತವೆ.

ಯೇಸು ಹೊರಟು ಹೋದ ನಂತರ, ಪರಿಶುದ್ಧಾತ್ಮನನ್ನು ಕಳುಹಿಸುವನೆಂದು ಆತನು ವಾಗ್ದನ ಮಾಡಿದ್ದನು (ಯೋಹಾನ 14:16, 17, 26; 15:26; 16:13) ಮನುಷ್ಯರು ಮಿತಿಗೆ ಒಳಪಡುವವರಾದರೂ, ಯೇಸು ಕ್ರಿಸ್ತನ ಶಕ್ತಿಯು ಅಪರಿಮಿತವಾಗಿತ್ತು, ಎಂದು ಅರಿತು, ಈ ವಾಗ್ದಾನದ ಅಧ್ಯಯನವನ್ನು ಮಾಡೋಣ.

## ಪ್ರಾಯೋಜನೆಗಳು

**ಪರಿಶುದ್ಧಾತ್ಮನ ದೀಕ್ಷಾಸ್ನಾನ**

ಪರಿಶುದ್ಧಾತ್ಮನ ಪ್ರಾಯೋಜನೆಗಳ ಕಲಿತು, ನಾಲ್ಕು ಪ್ರಶ್ನೆಗಳಿಗೆ ಉತ್ತರಿಸೋಣ. "ಯಾರು?"; "ಹೇಗೆ?"; "ಏನು?"; ಮತ್ತು "ಏಕೆ?"

(1) ಈ ಪ್ರಾಯೋಜನೆಯನ್ನು *ಯಾರು* ಹೊಂದಿದರು? ಯೇಸುವಿನ ಅಪೊಸ್ತಲರು ಪವಿತ್ರಾತ್ಮನ ಸ್ನಾನ ಹೊಂದಿದವರಲ್ಲಿ ಮೊದಲಿಗರು (ಮತ್ತಾಯ 3:11, 12). ಮುಂದಿನ ವಾಗ್ದಾನಕ್ಕಾಗಿ, ಯೇಸು, ಯೋಹಾನನ ಹೇಳಿಕೆಯನ್ನು ಹಿಂಬಾಲಿಸಿದನು (ಲೂಕ 24:46-49; ಅಪೊಸ್ತಲರ ಕೃತ್ಯಗಳು 1:4, 5, 8ಎ). ಅಪೊಸ್ತಲರ ಕೃತ್ಯಗಳು 2ರಲ್ಲಿ ಪರಿಶುದ್ಧಾತ್ಮನು ಅಪೊಸ್ತಲರ ಮೇಲೆ ಇಳಿದು ಬಂದನು (2:1-4), (1:26-2:1). ಅದು ಪ್ರವಾದನೆಯ ನೆರವರಿಕೆ (2:16, 17ಎ) ಇದು ಪ್ರವಾದನೆಯ ಪ್ರಾಥಮಿಕ ನೆರವೇರಿಕೆ ಆದರೆ ಅಪೊಸ್ತಲರ ಕೃತ್ಯ 2ರಲ್ಲಿ ಪರಿಶುದ್ಧಾತ್ಮನು ಯೆಹೂದ್ಯರ ಮೇಲೆ ಮಾತ್ರ ಇಳಿದು ಬಂದನು. ನಂತರ, ಅನ್ಯರ ಪ್ರತಿನಿಧಿಗಳ ಮೇಲೆ ಪರಿಶುದ್ಧಾತ್ಮನು ಇಳಿದು ಬಂದನು. ಕೊರ್ನೇಲ್ಯ ಮತ್ತು ಅವನ ಮನೆಯವರು (10:44-48). ಪೇತ್ರನು ಇದನ್ನು ಅಪೊಸ್ತಲರ ಕೃತ್ಯಗಳು 2 ರಲ್ಲಿ ರುವಂತೆಯೇ ಎಂದು ವರ್ಣಿಸಿರುವನು (11:15-17).

(2) ಈ ಪ್ರಾಯೋಜನೆಯನ್ನು ಹೇಗೆ ನೀಡಲಾಯಿತು? ಅದು *ದೇವರಿಂದ ನೇರವಾಗಿ* ನೀಡಲಾಯಿತು.

(3) ಈ ಪ್ರಾಯೋಜನೆಯು, ಏನನ್ನು ಹೊಂದಿತ್ತು? ಅಪೊಸ್ತಲರಿಗೆ ಅದ್ಭುತ ಶಕ್ತಿಯು ನೀಲ್ಪಟ್ಟಿತು. ಮನುಷ್ಯರಿಗೆ ನೀಡಲಾದ ಎಲ್ಲಾ ಶಕ್ತಿಗಳಿಗಿಂತ, ಅಪರಿಮಿತವಾದ ಶಕ್ತಿಯ ಪ್ರಾಯೋಜನೆಯಾಗಿತ್ತು. (ಕೊರ್ನೇಲ್ಯನು ಮತ್ತು ಅವನ ಸಂಬಂಧಿಗಳಿಗೂ ಅನ್ಯಭಾಷೆ ಮಾತನಾಡುವ ಅದ್ಭುತದ ಶಕ್ತಿಯನ್ನು ನೀಡಲಾಯಿತು.)

(4) ಈ ಪ್ರಾಯೋಜನೆಯ ಉದ್ದೇಶ*ವೇನು?* ಆತ್ಮನ ದೀಕ್ಷಾಸ್ನಾನವು, ಅದನ್ನು ಹೊಂದಿದವರಿಗೆ ರಕ್ಷಣೆಯನ್ನು ನೀಡಲಿಲ್ಲ (ಅಪೊಸ್ತಲಕೃತ್ಯಗಳು 11:14, 15). ಅಥವಾ ಅವರನ್ನು ಪಾಪರಹಿತರನ್ನಾಗಿಯೂ ಮಾಡಲಿಲ್ಲ (ಗಲಾತ್ಯ 2:11-14). ಸಕಲ ಅದ್ಭುತಕರವಾದ ಪ್ರಾಯೋಜನೆಗಳಂತೆ, ಪ್ರಸಂಗಿಗಳ ಪ್ರಸಂಗಕ್ಕೆ ಈ ವಿಷಯವು ಸ್ಫೂರ್ತಿಯನ್ನು ನೀಡಿತ್ತು (ಮಾರ್ಕ 16:20; ಇಬ್ರಿಯ 2:4). ಪರಿಶುದ್ಧಾತ್ಮನ ಸ್ನಾನವು ಇನ್ನೊಂದು ಉದ್ದೇಶವನ್ನು ಹೊಂದಿತ್ತು: *ಪ್ರಗತಿ ಸಾಧಿಸುವದಕ್ಕೆ* ಸೂಚನೆಯನ್ನು ನೀಡಿತ್ತು. ಅಪೊಸ್ತಲರ ಕೃತ್ಯಗಳು 2ರಲ್ಲಿ ಪರಿಶುದ್ಧಾತ್ಮನ ಸುವಾರ್ತೆಯನ್ನು ಮುಂದುವರಿಸುವಂತೆ ಅಪೊಸ್ತಲರಿಗೆ ಸೂಚನೆ ನೀಡಿತ್ತು (ಲೂಕ 24:46-49); ಅಪೊಸ್ತಲರ ಕೃತ್ಯಗಳು 10 ಮತ್ತು 11 ರಲ್ಲಿ, ಅನ್ಯರಿಗೆ ಸುವಾರ್ತೆ ಸಾರುವಂತ ಸೂಚನೆಯನ್ನು ಈ ಕಾರ್ಯವು ನೀಡಿತು. (ಅದನ್ನು ಸ್ವೀಕರಿಸಿದವರು, ದೇವರ ಕಾರ್ಯವನ್ನು ನಡೆಸುವ ಯೋಗ್ಯತೆಯನ್ನು ಅವರಿಗೆ ನೀಡಿತ್ತು.) ಹೊಸ ಒಡಂಬಡಿಕೆಯಲ್ಲಿ ಅದು ದಿನನಿತ್ಯದ ಕಾರ್ಯವಾಗಿರಲಿಲ್ಲ (11:15); ಈ ಎರಡು ಘಟನೆಗಳನ್ನು ಮಾತ್ರ ದಾಖಲು ಮಾಡಲಾಗಿದೆ.

**"ತಲೆಗಳ ಮೇಲೆ ಕೈಗಳನ್ನು ಇಡುವಂತ" ಪ್ರಾಯೋಜನೆ**

ತಲೆಗಳ ಮೇಲೆ ಕೈಗಳನ್ನು ಇಡುವ ಪ್ರಾಯೋಜನೆಯು, ಪರಿಶುದ್ಧಾತ್ಮನ ಸ್ನಾನದ ವಿಷಯಕ್ಕಿಂತ ವಿಭಿನ್ನವಾಗಿದೆ. ಅಪೊಸ್ತಲರು ಕೈಗಳನ್ನಿಡುವ ಮೂಲಕ ಈ ಕಾರ್ಯ ಉಂಟಾಯಿತು. ಪವಿತ್ರಾತ್ಮನ ಸ್ಥಾನ ಯಾವುದೇ ಮಾನವರ ಮೂಲಕ ಬಾರದೆ, ಅದು ದೇವರಿಂದ ನೇರವಾಗಿ ಬಂದ ಕಾರ್ಯವಾಗಿರುತ್ತದೆ.

ಆದಿ ಸಭೆಯ ದಿವಸಗಳಲ್ಲಿ, ಅಪೋಸ್ತಲರು ಮಾತ್ರ ಅದ್ಭುತ ಕಾರ್ಯಗಳನ್ನು ಮಾಡುತ್ತಿದ್ದರು ಎಂದು ಮಾತನಾಡುತ್ತಿದ್ದರು (2:43; 3:4-8; 5:12). ನಂತರ, ಕೆಲವರನ್ನು ವಿಶೇಷ ಕಾರ್ಯಕ್ಕೆ ಆಯ್ಕೆ ಮಾಡಿಕೊಂಡು, ಅಪೊಸ್ತಲರು ಅವರ ಮೇಲೆ ಕೈಗಳನ್ನಿಟ್ಟರು. ನಂತರ ಅವರುಗಳು ಅದ್ಭುತ ಕಾರ್ಯಗಳನ್ನು ಮಾಡಲು ಮುಂದಾಗಿ (6:6, 8; 8:6; ಹೋಲಿಸು 19:6), ಅವರು ಇನ್ನಿತರರಿಗೆ ಅದನ್ನು ನೀಡಲು ಅಸಾಧ್ಯವಾಯಿತು (8:14-17).

ಪರಿಶುದ್ಧಾತ್ಮನ ಸ್ನಾನವು ಅಪೊಸ್ತಲರಿಗೆ ವಿಶೇಷವಾದ ವರದಾನಗಳನ್ನು ನೀಡಿದರೂ ಅಪೊಸ್ತಲರಿಂದ ತಮ್ಮ ತಲೆಯ ಮೇಲೆ ಕೈ ಇಡಿಸಿಕೊಂಡವರು, ಅದ್ಭುತ ಕಾರ್ಯಗಳನ್ನು ನಡೆಸುವದರಲ್ಲಿ ಮಿತಿಗೆ ಒಳಪಟ್ಟಿದ್ದರು (ಹೋಲಿಸು 1 ಕೊರಿಂಥ 12:8-10).

(1) ಆದರೆ *ಯಾರು,* ಈ ಪ್ರಾಯೋಜನೆಯನ್ನು ಹೊಂದಿದರು? *ಕೆಲವು ಕ್ರೈಸ್ತರು* - ಪ್ರಾಯಶಃ ಅಪೊಸ್ತಲರಿಂದ ತಲೆಯ ಮೇಲೆ ಕೈ ಇಡಿಸಿಕೊಂಡವರು.

(2) ಈ ಪ್ರಾಯೋಜನೆಯನ್ನು *ಹೇಗೆ* ನೀಡಲಾಯಿತು? *ಅಪೊಸ್ತಲರು ಕೈಯನ್ನಿಡುವ ಮೂಲಕವಾಗಿ.*

(3) ಈ ಪ್ರಯೋಜನೆಯು *ಏನನ್ನು* ಒಳಗೊಂಡಿತ್ತು? ಅದ್ಭುತವಾದ *ಶಕ್ತಿ,* ಅದು ಮಿತಿಗೆ ಒಳಪಟ್ಟ ಶಕ್ತಿಯಾಗಿತ್ತು.

(4) ಮಹತ್ಕಾರ್ಯಗಳನ್ನು ಮಾಡುವ ಈ ಶಕ್ತಿಯನ್ನು *ಏಕೆ* ನೀಡಲಾಯಿತು? ಒಂದು "ಅಂತರವನ್ನು ಒಂದು ಮಾಡಲು" ನೀಡಲಾಯಿತು. ಹೊಸ ಒಡಂಬಡಿಕೆಯು ಪೂರ್ಣವಾಗುವವರೆಗೆ ನೀಡಲಾಗಿದೆ. ನಾವು ಅರಿತಿರುವ ಹೊಸ ಒಡಂಬಡಿಕೆಯು ಆ ದಿನಗಳಲ್ಲಿ ಇರಲಿಲ್ಲ. ಸಭೆಯು ಆರಂಭವಾಗಿ ಇಪ್ಪತ್ತು ವರ್ಷಗಳ ನಂತರ, ಬರೆಯಲ್ಪಟ್ಟಿತು.

60 ವರ್ಷಗಳ ನಂತರ ಅದು ಪುಸ್ತಕದ ರೂಪವಾಯಿತು. ಅಪೊಸ್ತಲರು ಏಕಕಾಲದಲ್ಲಿ, ಎಲ್ಲಾ ಕಡೆಯಲ್ಲಿಯೂ ಇರುವದು ಅಸಾಧ್ಯವಾಯಿತು, ಮತ್ತು ಪ್ರೇರಣೆಯ ಬೋಧನೆಗಳನ್ನು ಮಾಡಲು ಸಾಧ್ಯವಿರಲಿಲ್ಲ. ಅಪೊಸ್ತಲರ ಅನುಪಸ್ಥಿತಿಯಲ್ಲಿ, ಇತರರಿಗೆ ವರದಾನಗಳ ಅಗತ್ಯತೆ ಉಂಟಾಯಿತು. ಕೆಲವಾರು ವರಗಳು ಅವರಿಗೆ ದೇವರ ಸತ್ಯೋಪದೇಶವನ್ನು ನೀಡಿ ದವು; ಮತ್ತು ಬೋಧನೆ ಗೌರವವನ್ನು ಸಂದಿಸಿದವು (ಇಬ್ರಿಯ 2:3, 4). ಈ ವರಗಳು ಈ ದಿನಗಳ ಹೊಸ ಒಡಂಬಡಿಕೆಯಸಭೆಗಳು ಹೊಂದಿರುವ ಸಂಬಂಧವನ್ನು ಆದಿ ಸಭೆಯು ಸಹ ಹೊಂದಿತು.

| ಪರಿಶುದ್ಧಾತ್ಮನ ಮೂರು ವಿಧವಾದ ಪ್ರಯೋಜನೆಗಳು (ಪ್ರಕಟನೆಗಳು) | | | |
|---|---|---|---|
| | ಪರಿಶುದ್ಧಾತ್ಮ ದೀಕ್ಷಾಸ್ನಾನ | ಅಪೊಸ್ತಲರು ಕೈಗಳನ್ನಿಡುವದು | ಪರಿಶುದ್ಧಾತ್ಮನ ಅಂತರಾಳದ ವಾಸ |
| ಯಾರು? | ಆರಿಸಲ್ಪಟ್ಟ ಕೆಲವರು: ಕೊರ್ನೇಲಿಯನು ಅಪೊಸ್ತಲರು | ಕೆಲವು ಕ್ರೈಸ್ತರು | ಎಲ್ಲಾ ಕ್ರೈಸ್ತರು |
| ಹೇಗೆ? | ದೇವರಿಂದ ನೇರವಾಗಿ ಸ್ವೀಕರಿಸಿದರು | ಅಪೊಸ್ತಲರ ಕೈಗಳಿಂದ ಸ್ವೀಕರಿಸಿದರು | ದೀಕ್ಷಾಸ್ನಾನದ ಮೂಲಕ ಸ್ವೀಕರಿಸಿದರು |
| ಏನು? | ಮಹತ್ಕಾರ್ಯದ ಶಕ್ತಿ | ನಿಯಮಿತಗೊಂಡ ಮಹತ್ಕಾರ್ಯದ ಶಕ್ತಿ | ಮಹತ್ಕಾರ್ಯವಾಗಿರದೇ ತಾತ್ಕಾಲಿಕ ಕೊಡುಗೆ |
| ಏಕೆ? | ಮುಂದುವರಿಯುವ ಸೂಚನೆ (ಅರ್ಹತೆ ಹೊಂದುವದಕ್ಕೆ) | ಅಂತರವನ್ನು ತುಂಬುವದಕ್ಕೆ ಹೊಸ ಒಡಂಬಡಿಕೆ ಪೂರ್ಣವಾಗುವವರಿಗೆ | ಕ್ರೈಸ್ತರ ಸಹಾಯಕ್ಕೆ ಮತ್ತು ಬಲಕ್ಕೆ |
| ಯಾವಾಗ? | ಅಪೊಸ್ತಲರ ತಾತ್ಕಾಲಿಕವಾದ ಜೀವನ ಪರ್ಯಾಂತಕ್ಕೆ | ಸ್ವೀಕರಿಸಿದವರ ತಾತ್ಕಾಲಿಕ ಜೀವನ ಪರ್ಯಾಂತಕ್ಕೆ | ಈ ದಿನಗಳ ಸಕಲ ಕ್ರೈಸ್ತರಿಗೆ |

**ಪರಿಶುದ್ಧಾತ್ಮನ ವಾಸ**

ಈ ಹಿಂದೆ ತಿಳಿಸಲ್ಪಟ್ಟಿರುವ ಎರಡು ಪ್ರಾಯೋಜನೆಗಳ ಸಂಗಡ ಆತ್ಮನ ಅಂತರಾಳದ ವಾಸದ ಕುರಿತು ಅವಲೋಕನ ಮಾಡೋಣ:

(1) ಈ ಪ್ರಾಯೋಜನೆಯನ್ನು *ಯಾರು* ಹೊಂದಿದರು? *ಪ್ರತಿ ಕ್ರೈಸ್ತರು* ಅದನ್ನು ಹೊಂದುವರು (2:38; 5:32).

(2) ಈ ಪ್ರಾಯೋಜನೆ *ಹೇಗೆ* ಉಂಟಾಯಿತು? *ಕ್ರೈಸ್ತರು ದೀಕ್ಷಾಸ್ನಾನವನ್ನು ಹೊಂದಿದಾಗ* ಮುಳುಗುವ ಇದನ್ನು ಸ್ವೀಕರಿಸಿದರು (2:38).

(3) ಈ ಪ್ರಾಯೋಜನೆಯು *ಏನನ್ನು* ಒಳಗೊಂಡಿತ್ತು? ಇದು, ಇತರೇ ಎರಡು ಮಹತ್ಕಾರ್ಯಗಳ ಪ್ರಾಯೋಜನೆಯಂತಿರದೇ *ಅದು ದೇವರ ತಾತ್ಕಾಲಿಕವಾದ ಏರ್ಪಾಟಾಗಿರುತ್ತದೆ* (ರೋಮಾಪುರ 8:28).

(4) ಈ ಪ್ರಾಯೋಜನೆಯನ್ನು *ಏಕೆ* ನೀಡಲಾಯಿತು? ಜನರನ್ನು ಕ್ರೈಸ್ತರನ್ನಾಗಿ

ಮಾರ್ಪಡಿಸುವದಕ್ಕೆ ನೀಡದೇ ಅವರು ಕ್ರೈಸ್ತರಾಗಿದ್ದರಿಂದ ನೀಡಲಾಯಿತು (ಗಲಾತ್ಯ 4:6). *ಕ್ರೈಸ್ತರು ಬಲ ಮತ್ತು ಸಹಾಯವನ್ನು ಪಡೆಯಲು ಅವರಿಗೆ ನೀಡಲಾಯಿತು* (ರೋಮಾಪುರ 8:2, 11, 13, 15, 16, 26, 27).

## ಈ ದಿನಗಳಲ್ಲಿ ಈ ಪ್ರಯೋಜನೆಗಳ ಅಗತ್ಯತೆಯು ಇರುತ್ತದೆಯೇ?

ಈ ಪ್ರತಿಯೊಂದು ಪ್ರಾಯೋಜನೆಗಳ ಕುರಿತ ಕೊನೆಯ ಒಂದು ಪ್ರಶ್ನೆಯು ಇರುತ್ತದೆ: ಯಾವಾಗ? ಈ ಪ್ರಾಯೋಜನೆಗಳು ನಿರ್ಧಿಷ್ಟವಾದ ಅಂತ್ಯವು ಯಾವಾಗ ಉಂಟಾಗುತ್ತದೆ?

ಮೊದಲ ಎರಡು ಪ್ರಾಯೋಜನೆಗಳಿಗೆ ತಾತ್ಕಾಲಿಕವಾದದ್ದು ಮತ್ತು ಅವುಗಳು ಈಗಾಗಲೇ ಮುಗಿದು ಹೋಗಿವೆ. ಆತ್ಮನ ಸ್ನಾನವು ಅಪೊಸ್ತಲರ ಜೀವಿತಕ್ಕೆ ಮಾತ್ರ ಮೀಸಲಾಗಿತ್ತು. ಆತ್ಮನ ಸ್ನಾನವು ವಾಗ್ದನ ಎಂಬುದಾಗಿ ನೆನಪು ಮಾಡಿಕೊಳ್ಳಿರಿ, ಅದು ಅಪ್ಪಣೆಯಲ್ಲ. ಅದು ಕೆಲವರಿಗೆ ಮಾತ್ರ ಸೀಮಿತವಾಗಿತ್ತು, ಅದು ಎಲ್ಲಾ ಮನುಷ್ಯರಿಗೂ ಆಗಿರುವದಿಲ್ಲ ಅದರ ಉದ್ದೇಶವು ನೆರವೇರಿರುತ್ತದೆ, ಅದು ಇನ್ನೂ ಮುಂದೆ ನಡೆಯಲಾರದು. ಆ ಪರಿಶುದ್ಧಾತ್ಮನ ಸ್ನಾನದ, ಇಪ್ಪತ್ತು ವರ್ಷಗಳ ನಂತರ ಪೌಲನು ಒಂದೇ ದೀಕ್ಷಾಸ್ನಾನ ಎಂದು ತಿಳಿಸಿರುವನು (ಎಫೆಸ 4:5). ಕ್ರಿಸ್ತನು ಬರುವವರೆಗೆ ನೀರಿನ ದೀಕ್ಷಾಸ್ನನವು ಮುಂದುವರಿಯುತ್ತದೆ (8:36-39; 10:47, 48) (ಮತ್ತಾಯ 28:19, 20) ಅದು ಅಗತ್ಯವಾದದ್ದೆ, ಆ ದೀಕ್ಷಾಸ್ನಾನದ ಬಗ್ಗೆ ಪೌಲನು ತಿಳಿಸುತ್ತಿದ್ದಾನೆ. ಯಾರು ಸಹ ಪರಿಶುದ್ಧಾತ್ಮನ ಸ್ನಾನವನ್ನು ಹೊಂದಲಾರರು; ಅಪೊಸ್ತಲರು ಮಾಡಿದ ಅದ್ಭುತಗಳನ್ನು ಈ ದಿನಗಳಲ್ಲಿ ಯಾರೂ ಸಹ ಮಾಡಲಾರರು.

ಕೈಗಳನ್ನು ತಲೆಯ ಮೇಲೆ ಇಡುವಂಥದ್ದು, ಅದನ್ನು ಹೊಂದುವವರ ಜೀವನ ಪರ್ಯಂತಕ್ಕೂ ಅದಕ್ಕೆ ಮೀಸಲಾಗಿರುತ್ತಾರೆ. ಕಡೆಯ ಅಪೊಸ್ತಲನು ಮರಣವನ್ನು ಹೊಂದಿದ ನಂತರ, ಈ ವಿಧವಾದ ಶಕ್ತಿಗಳ ಕಾರ್ಯವು ಅಂತ್ಯಗೊಂಡಿತು. ಮಹತ್ಕಾರ್ಯಗಳ ವರಗಳು ತಾತ್ಕಾಲಿಕವಾದವು ಎಂದು ಹೊಸ ಒಡಂಬಡಿಕೆಯು ಒತ್ತಿ ಹೇಳುತ್ತದೆ (1 ಕೊರಿಂಥ 13:8-10; ಯಾಕೋಬ 1:25). ಇನ್ನೊಂದೆಡೆ, ದೇವರ ವಾಕ್ಯವು ಸದಾಕಾಲ ಇರುತ್ತದೆ (1 ಪೇತ್ರ 1:24, 25).

ಪರಿಶುದ್ಧಾತ್ಮನು ನಿರಂತರವಾಗಿ ನಮ್ಮಲ್ಲಿ ವಾಸಿಸುವ ಈ ಮೂರನೆಯ ಪ್ರಾಯೋಜನೆಯ ಕುರಿತು ಅಂತಿಮ ನಿರ್ಣಯವೇನು? ಅದು ಈ ದಿನಕ್ಕೂ ಮತ್ತು ಕ್ರೈಸ್ತ ಯುಗಕ್ಕೂ ಮೀಸಲಾದ ಸಂಗತಿಯಾಗಿದೆ. ವಾಕ್ಯಕ್ಕೆ ಅನುಗಣವಾಗಿ ನೀರಿನ ದೀಕ್ಷಾಸ್ನಾನ ಹೊಂದಿರುವವರಿಗಾಗಿ, ದೇವರು ಪರಿಶುದ್ಧಾತ್ಮನ ವರಗಳನ್ನು ನೀಡಿರುವನು (2:38) - ನೀರಿನ ದೀಕ್ಷಾಸ್ನಾನವು ಕ್ರೈಸ್ತ ಯುಗದ ಅಂತ್ಯದಲ್ಲಿ, ಅಂತ್ಯಗೊಳ್ಳುವದು (ಮತ್ತಾಯ 28:19, 20). ಆದುದರಿಂದ ಈ ವರವು ಕ್ರೈಸ್ತ ಯುಗದ ಅಂತ್ಯದವರೆಗೂ ಇರುತ್ತದೆ.

ಅಪೊಸ್ತಲರ ಕೃತ್ಯದಲ್ಲಿನ ಪವಿತ್ರಾತ್ಮನ ಕುರಿತಾದ ನಮ್ಮ ಅಧ್ಯಯನದಲ್ಲಿ ಪರಿಶುದ್ಧಾತ್ಮನು ಮುಂದುವರಿಸಿದಂತಹ - ಆತನು ಈಗಾಗಲೇ ಮಾಡಿರುವ ಆತನು ಮಾಡಬಹುದಾದ ಅಥವಾ ಮಾಡಲಾಗುವ ಕಾರ್ಯವನ್ನು ಕುರಿತು ಯೊಚಿಸದೇ, ಆತನು ಈ ದಿನಗಳಲ್ಲಿ ಮಾಡುವ ಕಾರ್ಯಗಳನ್ನು ಧ್ಯಾನಿಸಿದ್ದೇವೆ. "ಪವಿತ್ರಾತ್ಮನು ಯಾವ ಕಾರ್ಯವನ್ನು ಮಾಡುವನು?" ದೇವರ ವಾಕ್ಯದಿಂದಲೇ ಇದರ ಮಾಹಿತಿಯನ್ನು ಪಡೆಯುತ್ತೇವೆ. ನೇರವಾಗಿ ಹೇಳುವದಾದರೇ ಮನುಷ್ಯರ ಸಾಕ್ಷಿಯು ನಿರಾಧಾರ ಸತ್ಯವೇದವು ಪರಿಶುದ್ಧಾತ್ಮ ಪ್ರೇರಿತವಾಗಿರುವದರಿಂದ (2 ಪೇತ್ರ 1:21; ಯೋಹಾನ 16:13; 1 ಕೊರಿಂಥ 7:40; ಎಫೆಸ 3:5; ಪ್ರಕಟನೆ 2:7), ಪರಿಶುದ್ಧಾತ್ಮನ ಕಾರ್ಯಗಳ ಕುರಿತ ಸಾಕ್ಷಿಯನ್ನು ಬೈಬಲ್‌ನಲ್ಲಿ ಗಮನಿಸುತ್ತೇವೆ.

ತಪ್ಪಿಸಿಕೊಂಡ ಪಾಪಿಯ ಕುರಿತು ಹಾಗೂ ಕ್ರೈಸ್ತರ ಕುರಿತು ಪರಿಶುದ್ಧಾತ್ಮನು ಮಾಡುವ ಕಾರ್ಯಗಳನ್ನು ಕುರಿತು ಗ್ರಹಿಸೋಣ.

## ತಪ್ಪಿಹೋದ ಪಾಪಿಗಾಗಿ ಪರಿಶುದ್ಧಾತ್ಮನು ಮಾಡುವ ಕಾರ್ಯವೇನು?

ಪ್ರಖ್ಯಾತಿ ಪಡೆದ ಸಿದ್ಧಾಂತದ ಪ್ರಕಾರ ತಪ್ಪಿಹೋದ ಪಾಪಿಯು ರಕ್ಷಣೆಯನ್ನು ಹೊಂದುವ ಮೊದಲು ಪರಿಶುದ್ಧಾತ್ಮನು ನೇರವಾಗಿ ಕಾರ್ಯ ಮಾಡದ ಹೊರತು ಅವನು ದೇವರ ಪ್ರೀತಿಗೆ ಪ್ರತಿಕ್ರಿಯೆ ನೀಡಲಾರನು (ಈ ವಿಷಯವು ಆಯ್ಕೆಗೊಂಡವರಿಗೆ ಮಾತ್ರ ಸೀಮಿತ ಹೇಗೂ), ಬೈಬಲಿನ ಬೋಧನೆಯಲ್ಲಿ ಇದನ್ನು ಹೊಂದಲಾರದಂತೆ ಯಾರೂ ಸಹ ಹುಟ್ಟಿರುವದಿಲ್ಲ (ಮತ್ತಾಯ 18:3). ದೇವರ ಪ್ರೀತಿಗೆ ಪ್ರತಿಯೊಬ್ಬರು ಸ್ಪಂಧಿಸಬಹುದು (ಮತ್ತಾಯ 11:28-30).

ಪ್ರೊಟೆಸ್ಟಂಟ್ ಪ್ರಪಂಚದಲ್ಲಿ ಅನೇಕರು ಕ್ಯಾಲವೀನ್‌ರವರ ಸಿದ್ಧಾಂತವನ್ನು ಹಾಗೂ ನೀತಿಭ್ರಷ್ಟತೆಯ ಸಿದ್ಧಾಂತವನ್ನು ತಿರಸ್ಕಿರಿಸಿದ್ದರು, ಅನೇಕರು ಅವರ ಇತರೇ ಉಪದೇಶ, ಸಿದ್ಧಾಂತಗಳನ್ನು ಮೆಚ್ಚಿಕೊಂಡಿರುವರು - ಅದರಲ್ಲಿ ತಪ್ಪಿಹೋದ ಪಾಪಿಯ ಹೃದಯದಲ್ಲಿ ಪರಿಶುದ್ಧಾತ್ಮನು ಮಾಡುವ ಕಾರ್ಯದ ಸಿದ್ಧಾಂತವನ್ನು ಒಪ್ಪಿಕೊಂಡಿರುವರು. ವಾಕ್ಯವನ್ನು ಗಂಭೀರವಾಗಿ ಧ್ಯಾನ ಮಾಡುವಾಗ ತಪ್ಪಿಹೋದ ಪಾಪಿಯ ಹೃದಯದಲ್ಲಿ ಪರಿಶುದ್ಧಾತ್ಮನು ಪರೋಕ್ಷವಾಗಿ ಕಾರ್ಯಮಾಡುವನೆಂಬುದನ್ನು ಅರಿತುಕೊಳ್ಳುತ್ತೇವೆ, ಹಾಗೂ ದೇವರ ವಾಕ್ಯವು ಅವನ ಹೃದಯದಲ್ಲಿ ಮನವರಿಕೆಯನ್ನು ಮಾಡುತ್ತದೆಂಬುದನ್ನು ಅರಿಯುತ್ತೇವೆ. ಯೇಸು ಆತನ ಅಪೊಸ್ತಲರಿಗೆ ತಿಳಿಸಿ ಪರಿಶುದ್ಧಾತ್ಮನನ್ನು ಅವರಿಗೆ ಕಳುಹಿಸುವಾಗ, ಆತನು (ಪರಿಶುದ್ಧಾತ್ಮನು) ಅವರನ್ನು ಎಲ್ಲಾ ಸತ್ಯಕ್ಕೆ ನಡಿಸುವನು ಮತ್ತು ಪಾಪದ ಮನವರಿಕೆಯನ್ನು ಉಂಟುಮಾಡುವನು ಎಂದನು (ಯೋಹಾನ 16:7-14). ಪಂಚಾಶತ್ತಮದ ದಿವಸ ಪರಿಶುದ್ಧಾತ್ಮನು ಬಂದು ಮನುಷ್ಯರಲ್ಲಿ ಪಾಪದ ಅರಿವನ್ನುಂಟು ಮಾಡಿದನು - ಅದು ಪೇತ್ರನ ಪ್ರೇರಿತ ವಾದ ಪ್ರಸಂಗದಿಂದಲೇ ಉಂಟಾಯಿತು (ಅಪೊಸ್ತಲರಕೃತ್ಯಗಳು 2:37). ಇದು ಅಪೊಸ್ತಲರ ಕೃತ್ಯದ ಕ್ರಮದ ಪದ್ಧತಿಯಾಗಿದೆ.

ದೇವರ ವಾಕ್ಯವನ್ನು "ಆತ್ಮನ ಕತ್ತಿ ಎಂದು ಹೇಳಲಾಗಿದೆ" (ಎಫೆಸ 6:17; ಇಬ್ರಿಯ 4:12). ಆತ್ಮವೇ ಕತ್ತಿಯಾಗಿರದೆ, ಅದು ಆತ್ಮನ ಸಾಧನವಾಗಿರುತ್ತದೆ. ಪಂಚಾಶತ್ತಮ ದಿನದಿಂದ ಆ ಕತ್ತಿಯು ಜನರ ಹೃದಯಗಳನ್ನು ಕತ್ತರಿಸುತ್ತಲೇ ಇದೆ (ಅಪೊಸ್ತಲರ ಕೃತ್ಯಗಳು 2:37; 24:25; ರೋಮಾಪುರ 3:20; 7:7).

ಆತ್ಮನ ಕತ್ತಿಯ ಶಕ್ತಿಯನ್ನು ಹಗುರವಾಗಿ ಪರಿಗಣಿಸಬಾರದು! ಆ ಸತ್ಯವು ನಮಗೆ ಬಿಡುಗಡೆ ನೀಡುತ್ತದೆ (ಯೋಹಾನ 8:32; 17:17). ದೇವರ ವಾಕ್ಯದಿಂದ ನಾವು ಶುದ್ಧರಾಗಿದ್ದೇವೆ (ಯೋಹಾನ 17:17). ದೇವರ ವಾಕ್ಯದಿಂದ ತೊಳೆಯಲ್ಪಟ್ಟಿದ್ದೇವೆ (ಯೋಹಾನ 15:3). ಸುವಾರ್ತೆಯು ನಂಬುವವರೆಲ್ಲರಿಗೂ ರಕ್ಷಣೆಯನ್ನುಂಟು ಮಾಡುವಂತದ್ದಾಗಿದೆ (ರೋಮಾಪುರ 1:16). ಸುವಾರ್ತೆಯು ನಂಬಿಕೆಗೆ ಆಧಾರವಾಗಿದೆ (ರೋಮಾಪುರ 10:17). ವಾಕ್ಯವು ರಕ್ಷಣೆ ಹೊಂದಿಸುವ ಜ್ಞಾನವಾಗಿದೆ (2 ತಿಮೊಥೆ 3:14, 15). ವಾಕ್ಯಗಳು ನಮ್ಮ ಆತ್ಮಗಳನ್ನು ರಕ್ಷಿಸುತ್ತದೆ (ಯಾಕೋಬ 1:21) ಸತ್ಯೋಪದೇಶಕ್ಕೆ ವಿಧೇಯರಾದರೇ ಆತ್ಮಗಳು ಶುದ್ಧವಾಗುತ್ತವೆ (1 ಪೇತ್ರ 1:22, 23; ಕೊಲೊಸ್ಸೆ 1:5).

ಅಪೊಸ್ತಲರಕೃತ್ಯದಲ್ಲಿನ ಪರಿವರ್ತನೆಯ ನಿದರ್ಶನದ ಕುರಿತು ಮುಂದುವರಿಸುವಾಗ, ಅನ್ಯಪಾಪಿಯ ಹೃದಯದಲ್ಲಿ ಪರಿಶುದ್ಧಾತ್ಮನು ನೇರವಾದ ಕಾರ್ಯವನ್ನು ಮಾಡಲಿಲ್ಲ - ವಾಕ್ಯದ ಮೂಲಕ ಪರೋಕ್ಷವಾಗಿ ಮಾಡಿರುವನು (ಅಪೊಸ್ತಲರ ಕೃತ್ಯಗಳು 8:29-39).

ಪರಿಶುದ್ಧಾತ್ಮನು ನೇರವಾಗಿ ಸಾಧಿಸುವ ಕಾರ್ಯದ ಕುರಿತು (1) ದೇವರು ಗೌರವಕ್ಕೆ ಪಾತ್ರನು ಎಂಬುದಾಗಿ ಮಾಡುತ್ತಾನೆ (ಅಪೊಸ್ತಲರ ಕೃತ್ಯಗಳು 10:34, 35; 2 ಪೇತ್ರ 3:9), (2) ಪಾಪಿಯ ವೈಯಕ್ತಿಕವಾದ ಹೊಣೆಗಾರಿಕೆಯ ಭಾರವನ್ನು ಹಗುರ ಮಾಡುವನು ಅಥವಾ (ತೆಗೆದು ಹಾಕುವನು) (ಮತ್ತಾಯ 16:24). ಮತ್ತು ಆತ್ಮಗಳನ್ನು - ಗೆಲ್ಲುವವರ ಭಾರವನ್ನು ಹಗುರ ಮಾಡುವನು (ಮಾರ್ಕ 16:15, 16; 1 ಕೊರಿಂಥ 9:16), ಮತ್ತು (3) ಆದಿಯಿಂದಲೂ

ದೇವರು ಮನುಷ್ಯರೊಂದಿಗೆ ಸ್ಥಾಪನೆ ಮಾಡಿಕೊಂಡ ಸಂಭಾಷಣೆಯ ಮೂಲವಾಗಿದ್ದಾನೆ. ವಾಕ್ಯದ ಮೂಲಕ ದೇವರು ಜನರನ್ನು ಸೆಳೆದುಕೊಳ್ಳುವನು (ಯೋಹಾನ 6:44, 45). ತಪ್ಪಿಹೋದ ಪಾಪಿಯ ಹೃದಯದಲ್ಲಿ ದೇವರ ಆತ್ಮನ ಸಾಧನೆಯ ಕಾರ್ಯದ ಸಿದ್ಧಾಂತವು ಸತ್ಯವಾಗಿದ್ದರೆ ದೇವರು ತನ್ನದೇ ಆದ ಯೋಜನೆಯನ್ನು: ದೇವರು - ಕ್ರಿಸ್ತನು - ಪರಿಶುದ್ಧಾತ್ಮನು - ಅಪೊಸ್ತಲರು - ಪ್ರೇರಿತವಾದ ವಾಕ್ಯ - ಈ ಎಲ್ಲಾದ್ದರಿಂದ ಮನುಷ್ಯರನ್ನು ಹೊರತು ಪಡಿಸುತ್ತಿದ್ದನು.

## ಕ್ರೈಸ್ತರಿಗಾಗಿ ಪರಿಶುದ್ಧಾತ್ಮನು ಯಾವ ಕಾರ್ಯವನ್ನು ಮಾಡುವನು?

ಕ್ರೈಸ್ತರಲ್ಲದವರಲ್ಲಿ ಮಾಡದ ಕೆಲಸವನ್ನು ಕ್ರೈಸ್ತರಲ್ಲಿ ಪರಿಶುದ್ಧಾತ್ಮನು ಮಾಡುವನೆಂದು ನಾನು ನಂಬುತ್ತೇನೆ (ಎಫೆಸ 1:12, 13). ನಂಬಿಗಸ್ತನಾದ ದೇವರ ಮಗುವಿನ ಜೀವಿತದಲ್ಲಿ ಕ್ರಿಯಾತ್ಮಕವಾಗಿ ಆತನು ಕಾರ್ಯಮಾಡುವನು.

(ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ) ನಾವು ಕ್ರೈಸ್ತರಾಗುವಾಗ, ಪರಿಶುದ್ಧಾತ್ಮನ ವರಗಳನ್ನು ಸ್ವೀಕರಿಸುತ್ತೇವೆ (ಅಪೊಸ್ತಲರ ಕೃತ್ಯಗಳು 2:38; 5:32; ಗಲಾತ್ಯ 4:6). ಇದು ಮಹತ್ಕಾರ್ಯವಲ್ಲದ ಆತ್ಮನ ಶಕ್ತಿಯ ಪ್ರಕಟನೆಯಾಗಿದೆ, ಹೊಸ ಒಡಂಬಡಿಕೆಯಲ್ಲಿ ಇದನ್ನು ಅಂತರಾಳದಲ್ಲಿನ ಆತ್ಮನ ವಾಸ ಎಂದು ತಿಳಿಸಲಾಗಿದೆ (ರೋಮಾಪುರ 8:9, 11; 1 ಕೊರಿಂಥ 3:16; 6:19; 2 ತಿಮೊಥೆ 1:14). ದೇವರು ತನ್ನ ಆತ್ಮನ ಮೂಲಕ ಸಹಾಯವನ್ನು ಮತ್ತು ಬಲವನ್ನು ನೀಡುತ್ತಾನೆ.

ಕೆಲವರು ಇದನ್ನು ನಿರಾಕರಿಸುವ ಕ್ರಮವೇನೆಂದರೆ: (1) ಒಬ್ಬನು ತನ್ನಲ್ಲಿ ಸ್ಪರ್ಶಜ್ಞಾನವನ್ನು ಹೊಂದಿರುವದರಿಂದ ಪರಿಶುದ್ಧಾತ್ಮನು ಅವನಲ್ಲಿ ವಾಸಿಸಿರುವನೆಂದು ತಿಳಿಯಲಾರನು. ಸ್ಪರ್ಶಜ್ಞಾನವು ಮೋಸಕರವಾದದ್ದೆ, ಸಮಯದಿಂದ ಸಮಯಕ್ಕೆ ಸ್ಪರ್ಶಜ್ಞಾನವು ಬದಲಾಗುತ್ತದೆ. ಪರಿಶುದ್ಧಾತ್ಮನು ಆತ್ಮನಾಗಿರುವದರಿಂದ ನಮ್ಮ ಪಂಚೇಂದ್ರಿಯಗಳ ಮೂಲಕ ಆತನನ್ನು ಅರಿಯುವದು ಅಸಾಧ್ಯ. ಒಂದು ವೇಳೆ ನಾವು ದೀಕ್ಷಾಸ್ನಾನ ಹೊಂದಿದ ವಿಶ್ವಾಸಿಗಳಾಗಿದ್ದರೆ, ಪರಿಶುದ್ಧಾತ್ಮನು ನಮ್ಮೊಳಗೆ ವಾಸಿಸುವನೆಂದು ಅರಿಯುತ್ತೇವೆ ಏಕೆಂದರೆ ವಾಕ್ಯವೇ ಇದನ್ನು ತಿಳಿಸುತ್ತದೆ. ಅದನ್ನು ನಂಬಿಕೆಯಿಂದಲೇ ಸ್ವೀಕರಿಸುತ್ತೇವೆ (ಗಲಾತ್ಯ 3:14). (2) ಪರಿಶುದ್ಧಾತ್ಮನಿಂದುಂಟಾಗುವ ಆಶೀರ್ವಾದಗಳನ್ನು ವಾಕ್ಯ ಧ್ಯಾನ ಮಾಡುವದರಿಂದಲೂ ಅದಕ್ಕೆ ವಿಧೇಯರಾಗವದರಿಂದಲೂ ಅದನ್ನು ಪ್ರತ್ಯೇಕಿಸಲು ಅಸಾಧ್ಯ.

ನಮ್ಮ ಆಶೀರ್ವಾದಕ್ಕಾಗಿ ನಮ್ಮಲ್ಲಿ ವಾಸಿಸಿರುವ ಪರಿಶುದ್ಧಾತ್ಮನನ್ನು ಆಳವಾಗಿ ಅರಿತುಕೊಳ್ಳುವದು ಅನಗತ್ಯ. ನಾವು ದೇವರಾತ್ಮನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಆತನ ವಾಕ್ಯಕ್ಕೆ ವಿಧೇಯರಾದರೆ ಆತನು ನಮಗೆ ಸಹಾಯವನ್ನು ಬಲವನ್ನೂ ನೀಡುವನು. ಆತನು ಹೇಳಿರುವಂತದ್ದನ್ನು ನಾವು ಅರಿತುಕೊಳ್ಳುವಾಗ ಅದರಿಂದ ನಮಗೆ ಆದರಣೆಯುಂಟಾಗುತ್ತದೆ. ಕ್ರೈಸ್ತರಿಗೆ ಆತ್ಮನಿಂದುಂಟಾಗುವ ಕಾರ್ಯಗಳ ಸಂಕ್ಷಿಪ್ತ ವರದಿಯು ಇಲ್ಲಿರುತ್ತದೆ: (1) ಆತನು ನಮ್ಮಲ್ಲಿರುವದರಿಂದ ನಾವುಗಳು ದೇವರ ಮಕ್ಕಳೆಂದು ರುಜುವಾತಾಗುತ್ತದೆ (ಗಲಾತ್ಯ 4:6; 1 ಯೋಹಾನ 3:24; 4:13). (2) ಪರಿಶುದ್ಧಾತ್ಮನು ನಮಗೆ ಪರಲೋಕದ ಸಂಚಾರಕಾರವಾಗಿದ್ದಾನೆ (ಎಫೆಸ 1:13, 14). (3) ಕ್ರೈಸ್ತ ಜೀವಿತವನ್ನು ಜೀವಿಸುವದಕ್ಕೂ, ಪ್ರಾರ್ಥಿಸುವದಕ್ಕೂ, ಪುನರುತ್ಥಾನದಲ್ಲಿ ಪಾಲುಗಾರರಾಗುವದಕ್ಕೂ ಆತನು ನಮಗೆ ಸಹಾಯಿಸುತ್ತಾನೆ (ರೋಮಾಪುರ 8:2, 11, 13, 26, 27 ಮುಂತಾದವು).

ಪರಿಶುದ್ಧಾತ್ಮನು ನಮ್ಮಲ್ಲಿ ವಾಸಿಸುವ ಪಾತ್ರದ ಕುರಿತಾಗಿ, ನಮ್ಮಲ್ಲಿ ವೃದ್ಧಿಯಂಟಾಗುತ್ತದೆಂಬುದು ನಮ್ಮಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. "ಅದರಿಂದ ನಮ್ಮಲ್ಲಿ ಪರಿಶುದ್ಧಾತ್ಮನ ಫಲಗಳು ಉಂಟಾಗುತ್ತವೆ" (ಗಲಾತ್ಯ 5:22, 23).

> ಪ್ರೀಯರೆ, ಪರಿಶುದ್ಧಾತ್ಮನು ನಮ್ಮಲ್ಲಿ ವಾಸಿಸುವ ಉದ್ದೇಶದ ಮೂಲಕ ಯೇಸು ಕ್ರಿಸ್ತನ ಮಹಿಮೆಯ ವ್ಯಕ್ತಿತ್ವವನ್ನು ಸೌಂದರ್ಯವನ್ನು ನಮ್ಮಲ್ಲಿ ಪುನಃ ಸೃಷ್ಟಿಸುತ್ತದೆ. ಪರಲೋಕದ ಹೂಗಳನ್ನು ಭೂಮಿಯಲ್ಲಿ ನೋಡಬೇಕಾದರೆ ಅದರ ಬೀಜಗಳನ್ನು ಪರಲೋಕದಿಂದ ಆಮದು ಮಾಡಿಕೊಳ್ಳಬೇಕು.[1]

ದೇವರ ಆತ್ಮದಿಂದ ಒಬ್ಬ ಕ್ರೈಸ್ತನು ತುಂಬಿಸಲ್ಪಟ್ಟಿರುವನೆಂದು ತೋರ್ಪಡಿಸಿಕೊಳ್ಳಬೇಕೇ ಹೊರತು, ಆರಾಧನೆಯಲ್ಲಿ ಗಟ್ಟಿಯಾಗಿ ಕೂಗಿ ಕೊಳ್ಳುವ ಮೂಲಕವಲ್ಲ, ಆದರೆ ಕ್ರಿಸ್ತನ ಜೀವಿತವು ಅವನಲ್ಲಿ ಪ್ರತಿಬಿಂಬಿಸಬೇಕು.

## ಮುಕ್ತಾಯ

ನಿಮ್ಮ ಆತ್ಮಗಳ ಕುರಿತು ತಂದೆ ಮತ್ತು ಮಗನು ಚಿಂತನೆ ನಡೆಸುವಂತೆ, ಪರಿಶುದ್ಧಾತ್ಮನು ಸಹ ಚಿಂತನೆ ಮಾಡುವನು (ಪ್ರಕಟನೆ 22:17). ಆತ್ಮನನ್ನು ತಿರಸ್ಕರಿಸದೇ, ಬೈಬಲಿನಲ್ಲಿ ಆತನು ಹೇಳಿರುವದನ್ನೇ ಅನುಸರಿಸಿರಿ. ನಿಮಗೆ ದೀಕ್ಷಾಸ್ನಾನದ ಅಗತ್ಯತೆಯಿದ್ದರೆ ವಾಕ್ಯದ ಮೂಲಕ ದೇವರ ಆತ್ಮನು ನಿಮಗೆ ಮನವರಿಕೆ ಮಾಡಲಿ. ನೀವು ದೇವರ ಮಗುವಾಗಿದ್ದರೆ, ವಾಕ್ಯಕ್ಕೆ ವಿಧೇಯರಾಗುವ ಮೂಲಕ ಆತ್ಮನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಿರಿ. ಆಗ ಆತನು ನಿಮ್ಮ ಜೀವಿತವನ್ನು ಆಶೀರ್ವದಿಸುವನು!

---

ಟಿಪ್ಪಣಿ

[1]George W. Bailey, Lecture presented at Central Christian College, Bartlesville, Okla., n.d.

# ಲೂಕನಿಂದ ಬಳಕೆಯಾದ ಸಾಧ್ಯತೆಯುಳ್ಳ ಆಧಾರಗಳು

ಲೂಕ 1:1-4 (ಇದು ಕೇವಲ ಲೂಕನ ಪುಸ್ತಕದ ಪರಿಚಯವನ್ನು ಮಾತ್ರ ಕೊಡುವುದಿಲ್ಲ, ಅಪೊಸ್ತಲರ ಕೃತ್ಯಗಳು ಪುಸ್ತಕದ ಬಗೆಗೂ ವಿವರಣೆ ಕೊಡುವತ್ತ ನಡೆಸುತ್ತದೆ) "ಲೂಕನು ಪ್ರತಿಯೊಂದನ್ನೂ ಆರಂಭದಿಂದಲೂ ಜಾಗರೂಕತೆಯಿಂದ ಶೋಧನೆಮಾಡಿದ್ದಾನೆ" ಎಂಬ ಸಂಗತಿಯನ್ನು ತಿಳಿಸುತ್ತದೆ. ಲೂಕನು ಹೋಗಿರಬಹುದಾದ ಎಲ್ಲಾ ಸ್ಥಳಗಳನ್ನು ಆತನು ಸಂಧಿಸಿದ ಎಲ್ಲಾ ವ್ಯಕ್ತಿಗಳ ಬಗೆಗೂ ನಾವು ತಿಳಿದಿಲ್ಲ, ಆದರೆ ಲೂಕನು ತಾನು ಅಪೊಸ್ತಲರ ಕೃತ್ಯವನ್ನು ಬರೆಯುವಾಗ ಆತನು ಬಳಸಿದ ಅನೇಕ ಆಧಾರಗಳು ಇಲ್ಲಿವೆ:[1]

1. ವೈಯಕ್ತಿಕ ಅನುಭವ: ಲೂಕನು ಪೌಲನೊಂದಿಗೆ ದೀರ್ಘವಾದ ಪ್ರಯಾಣವನ್ನು ಮಾಡಿದನು (ಅಪೊಸ್ತಲರ ಕೃತ್ಯದಲ್ಲಿನ "ನಾವು" ಎಂಬುದಾಗಿ ಸಂಭೋಧಿಸಿದ ಪರಿಚ್ಛೇದವನ್ನು ಗಮನಿಸಿರಿ). ಈ ಪ್ರಯಾಣಗಳ ವಿವರವಾದ ಸಂಗತಿಗಳು ತಿಳಿಸುವುದೇನೆಂದರೆ ಲೂಕನು ತಾನು ಪ್ರಯಾಣಿಸುವಾಗ ದಿನಚರಿಯ ಪುಸ್ತಕವನ್ನು ಹೊಂದಿರುತ್ತಿದ್ದನು ಎಂದು.

2. ಪೌಲ: ಅವರು ಪ್ರಯಾಣಿಸುತ್ತಿರುವಂತೆ, ಪೌಲನು, ಸ್ತೆಫನನನ್ನು ಸಭಾಮಂದಿರಲ್ಲಿರುವುದಕ್ಕಿಂತ ಮುಂಚೆ ಏನು ಸಂಭವಿಸಿತೆಂದೂ (ಹೋಲಿಸಿ ಅಪೊಸ್ತಲರ ಕೃತ್ಯಗಳು 7:58; 8:1), ಯೇಸುಕ್ರಿಸ್ತನ ಜೀವನದ ಕೆಲ ಪ್ರಕಟನೆಗಳನ್ನು (1 ಕೊರಿಂಥ 11:23-25) ಒಳಗೊಂಡ ವಿಶೇಷ ಪ್ರಕಟನೆಗಳನ್ನು (2 ಕೊರಿಂಥ 12:1, 7) ಪೌಲನು ಹೊಂದಿದ್ದನು.

3. ಯೆರೂಸಲೇಮಿನಿಂದ ಪಡೆದ ಅಪೊಸ್ತಲರ ನ್ಯಾಯ ನಿಬಂಧನೆಗಳು: ಈ ನಿಬಂಧನೆಗಳು ಬರೆಯಲ್ಪಟ್ಟವು ಮತ್ತು ಸಿರಿಯಾದಲ್ಲಿನ ಅಂತಿಯೋಕ್ಯಕ್ಕೆ ಕಳಿಹಿಸಲ್ಪಟ್ಟವು ಆಗಿದ್ದವು (ಅಪೊಸ್ತಲರ ಕೃತ್ಯಗಳು 15:22-29; 21:25 ಸಹ ನೋಡಿರಿ). ಅವುಗಳು ಬಹುಶಃ ಅಂತಿಯೋಕ್ಯದಲ್ಲಿ ಸಂಗ್ರಹಿಸಲ್ಪಟ್ಟವು ಆಗಿರಬೇಕು. ಗಮನಿಸಿರಿ, ಸಂಪ್ರದಾಯದ ಪ್ರಕಾರ, ಲೂಕನು ಅಂತಿಯೊಕ್ಯದವನು.

4. ಮನಹೇನನು (ಅಪೊಸ್ತಲರ ಕೃತ್ಯಗಳು 13:1): ಈತನು ಅಂತಿಯೋಕ್ಯದ ಕ್ರೈಸ್ತನಾಗಿದ್ದು "ಉಪರಾಜನಾದ ಹೆರೋದನಿಂದ ಬೆಳಸಲ್ಪಟ್ಟವನಾಗಿದ್ದನು," ಮನಹೇನನು ಹೇರೋದನ ಕುಟುಂಬದ ಬಗೆಗೆ ಲೂಕನಿಗೆ ಹೆಚ್ಚಿನದನ್ನು ಹೇಳಿರಬೇಕು.

5. ಸುವಾರ್ತಿಕನಾದ ಫಿಲಿಪ್ಪನು: ಲೂಕನು ಕೈಸರೈಯಲ್ಲಿದ್ದಾಗ, ಆತನು ಫಿಲಿಪ್ಪನ ಮನೆಯಲ್ಲಿ ವಾಸವಾಗಿದ್ದನು (ಅಪೊಸ್ತಲರ ಕೃತ್ಯಗಳು 21:8), ಅಲ್ಲಿಂದಲೇ ಆತನು ಏಳು ಜನಸಹಾಯಕರ ನೇಮಕ (ಅಪೊಸ್ತಲರ ಕೃತ್ಯಗಳು 6:1-6) ಮತ್ತು ಸಮಾರ್ಯದವರ ಹಾಗೂ ಐಥಿಯೋಪ್ಯದ ಕಂಚುಕಿಯ ಪರಿವರ್ತನೆ ಬಗೆಗೆ ಕಲಿತನು (ಅಪೊಸ್ತಲರ ಕೃತ್ಯಗಳು 8).

6. ಕುಪ್ರದ್ವೀಪದ ಮ್ನಾಸೋನ: ಲೂಕನು ಕುಪ್ರದ್ವೀಪದ ಮ್ನಾಸೋನನ ಜೊತೆಯಲ್ಲಿ ವಾಸಿಸಿದ್ದನು (ಅಪೊಸ್ತಲರ ಕೃತ್ಯಗಳು 21:16), ಆತನ ಮೂಲಕವಾಗಿ ಕುಪ್ರದ್ವೀಪದಲ್ಲಿ ಸಭೆಯ ಸಂಸ್ಥಾಪನೆಯ ವಿವರಗಳನ್ನು ಲೂಕನು ಸಂಪಾದಿಸಿರಬಹುದು (ಅಪೊಸ್ತಲರ ಕೃತ್ಯಗಳು 13:4-12).

7. ಯೆರೂಸಲೇಮಿನ ನಾಯಕರುಗಳು: ಲೂಕನು ಯೆರೂಸಲೇಮಿನಲ್ಲಿದ್ದಾಗ (ಅಪೊಸ್ತಲರ ಕೃತ್ಯಗಳು 21:17), ಕರ್ತನ ಸಹೋದರನಾದ ಯಾಕೋಬನ ಜೊತೆಯಲ್ಲಿ ಹಾಗೂ ಸಭೆಯ ಆರಂಭದಿಂದಲೂ ಇದ್ದಂತಹ ಇತರರೊಡನೆ ಭೇಟಿ ಕೊಡುವಲ್ಲಿ ಆತನಿಗೆ ಅನೇಕ ಸಂದರ್ಭಗಳಿದ್ದವು. ಬಹುಶಃ ಕೆಲ ಅಪೊಸ್ತಲರು ಇನ್ನೂ ಅಲ್ಲಿದ್ದರು. ಬಹುಶಃ ಯೇಸುವಿನ ತಾಯಿಯಾದ ಮರಿಯಳು,[2] ಇನ್ನೂ ಪ್ರದೇಶದಲ್ಲಿ ಇದ್ದರಬಹುದು. ಲೂಕನು

ಕೇವಲ ಆದಿ ಕಾಲದ ಸಭೆಯ ಬಗೆಗೆ ಮಾತ್ರ ಕಲಿತಿರಲಿಲ್ಲ, ಆದರೆ ಯೆರೂಸಲೇಮಿನ ನ್ಯಾಯಮಂಡಳಿಯಲ್ಲಿ ನಡೆದಿರಬಹುದರ ಬಗೆಗೆ ಸಹ ಕಲಿತಿರಬಹುದು (ಅಪೊಸ್ತಲರ ಕೃತ್ಯಗಳು 15).

8. ಆದಿ ಸಭೆಯ ಇತರೆ ನಾಯಕರುಗಳು: ಪೌಲನ ಟಿಪ್ಪಣಿಗಳು ಆತನಿಗೆ ಹತ್ತಿರದ ಅನೇಕ ಪತ್ರಗಳಲ್ಲಿ ಲೂಕನು ಅಲ್ಲಿದ್ದಾಗ ಸೀಲ, ತಿಮೊಥೆಯರು, ಮತ್ತು ಇತರರು ಪೌಲನೊಂದಿಗೆ ಇದ್ದರು ಎಂದು ಸೂಚಿಸುವಂತವುಗಳಾಗಿವೆ. ಈ ಆದಿ ನಾಯಕರುಗಳಿಂದ, ಲೂಕನು ಹೆಚ್ಚಾಗಿ ಕಲಿತನು.

9. ಯೆರೂಸಲೇಮಿನಂತಹ ಸ್ಥಳೀಯ ಸಭೆಯಲ್ಲಿ ಸಿಕ್ಕಿದ ಲಿಖಿತ ಮತ್ತು ಮೌಖಿಕ ಇತಿಹಾಸಗಳು: ಒಂದು ಸಭೆಗೆ ಆದ ಸಂಗತಿಯ ಬಗೆಗೆ ಇನ್ನೊಂದು ಸಭೆಗೆ ಕಳಕಳಿ ಇತ್ತು. (ಸಭೆಗೆ ಪೌಲನ ಬರೆದ ಪತ್ರಗಳಲ್ಲಿ ಯಾವಾಗಲೂ ಇತರ ಸಭೆಯವರು ಆತನು ಉದ್ದೇಶಿಸಿ ಬರೆಯುವ ಸಭೆಯ ಬಗೆಗೆ ತಿಳಿದಿರುತ್ತಿದ್ದರು ಎಂದು ಸೂಚಿಸಿದ್ದಾನೆ.) ಈ ಘಟನೆಗಳು ಮಹತ್ವವಾದ್ದರಿಂದ, ಇದು ಬರೆದಿಟ್ಟುಕೊಂಡಿರುವದಕ್ಕೂ ಸಾಧ್ಯವಿದೆ.

ಈ ಮೇಲಿನ ಪಟ್ಟಿಯು ಲೂಕನಿಂದ ಉಪಯೋಗಿಸಲ್ಪಟ್ಟ ಮೂಲಗಳ ಸಾಧ್ಯತೆಗಳನ್ನು ಕೊಡುತ್ತದೆ. ಹೇಗೂ, ಅತೀ ಮುಖ್ಯವಾದ ಆಧಾರವೆಂದರೆ (ಅತೀ ಅವಶ್ಯಕವಾದ) ಪರಿಶುದ್ಧಾತ್ಮನು ತಾನೇ ಆಗಿದ್ದಾನೆ.

---

ಟಿಪ್ಪಣಿಗಳು

[1]ಬ್ರೂಸ್ ಎಮ್ ಮೆಟಜರ್ Bruce M. Metzger, *The New Testament: Its Background, Growth, and Content* (New York: Abingdon Press, 1965). [2]ಆದಿಕಾಲದ ಸಂಪ್ರದಾಯಗಳು ಹೇಳುವುದೇನೆಂದರೆ ಯೋಹಾನನು ಮರಿಯಳನ್ನು ತನ್ನ ಜೊತೆ ಎಫೆಸಕ್ಕೆ ಕರೆದೊಯ್ದನು ಮತ್ತು ಅವಳು ಅಲ್ಲಿಯೇ ತೀರಿಹೋದಳು. ಒಂದು ವೇಳೆ ಇದು ಕೂಡಾ ನಿಜವಾಗಿದ್ದಾದರೆ, ಹೇಗೋ, ಇದು ಲೂಕನು ಯೆರೂಸಲೇಮಿಗೆ ಬೇಟಿ ಇಟ್ಟ ನಂತರದಲ್ಲಿ ಆಗಿರಬೇಕು.

# ಕೊರ್ನೇಲ್ಯನ ಕುರಿತಾದ ಪ್ರಶ್ನೆಗಳು

**ಪ್ರಶ್ನೆ:** ಸೈನ್ಯದಲ್ಲಿ ಸೇವೆ ಮಾಡುತ್ತಿರುವ ಕ್ರೈಸ್ತರು ಕೊರ್ನೇಲ್ಯನಿಂದ ಯಾವ ಪಾಠವನ್ನು ಕಲಿಯಬಹುದು?

**ಉತ್ತರ:** ಅಲ್ಲವಾಗಿದ್ದರೂ, ಕೆಲವೆಯಾಗಿದ್ದರೂ ಕೊರ್ನೇಲಿಯನು ಸೇನೆಯಲ್ಲಿದ್ದ ಮನುಷ್ಯನೆಂಬುದು ಸತ್ಯವಾದದ್ದು - ಮತ್ತು ದೀಕ್ಷಾಸ್ನಾನದ ನಂತರ ಅವನು ತನ್ನ ಉದ್ಯೋಗ ದಲ್ಲಿ ಬದಲಾವಣೆಯನ್ನು ಮಾಡಿಕೊಂಡನೆಂಬ ಸೂಚನೆಗಳಿರುವದಿಲ್ಲ - ಕ್ರೈಸ್ತರು ಸೇನೆಯಲ್ಲಿ ಕೆಲಸ ಮಾಡಬಹುದೆಂದು ರುಜುವಾತು ಮಾಡಿರುವನು. ಈ ಒಂದು ನಿಶಬ್ಧವಾದ ಹೇಳಿಕೆ ಯಿಂದ ತರ್ಕ ಮಾಡಲು ಸಾಧ್ಯವಿಲ್ಲ ಎಂಬ ಸಲಹೆಗಳಿವೆ. J. W. ಮೆಕ್‌ಗಾರ್ವೆಯವರ ಹೇಳಿಕೆಯಂತೆ, "ಒಬ್ಬ ಸೈನಿಕನು ಕ್ರೈಸ್ತನಾದನೇ ಹೊರತು, ಒಬ್ಬ ಕ್ರೈಸ್ತನು ಸೈನಿಕನಾಗಲಿಲ್ಲ ಎಂದು ನಿದರ್ಶಿಸಿರುವರು - ಮೊದಲನೆಯದು ರುಜುವಾತಾಗಿದೆಯೆ, ವಿನಃ ನಂತರದ್ದಲ್ಲ."[1] ನನ್ನಲ್ಲಿ ಹಳೆಯದಾದ ನೆನಪಿರುವಂತೆ, ಸಭಿಕರಲ್ಲಿ, ಕ್ರೈಸ್ತರು ಸೈನ್ಯವನ್ನು ಸೇರಬಹುದೇ ಎಂಬ ಸಂಶಯವಿದೆ; ನಾನು ತಿಳಿದಿರುವ ಹಾಗೆ, ಈ ವಿಷಯದಲ್ಲಿ ಯಾವುದೇ ವಿಧವಾಗಿ ಸಭೆಯನ್ನು ವಿಭಜನೆ ಮಾಡಿರುವದಿಲ್ಲ. ಈ ವಿಷಯದ ಕುರಿತು ವಾಕ್ಯದಲ್ಲಿ ಸ್ಪಷ್ಟನೆ ಇರುವದಿಲ್ಲ, ಅದ್ದರಿಂದ ರೋಮಾಪುರ 14 ನಿಯಮದಂತೆ ಅಭಿಪ್ರಾಯವನ್ನು ಹೊಂದಬಹುದು: "ಪ್ರತಿಯೊಬ್ಬನು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು" (ವಚನ 5), ಅವನೊಂದಿಗೆ ಒಪ್ಪದವನೊಂದಿಗೆ ಸಲಹೆಯನ್ನು ತೋಲಿಸಲಿ.

**ಪ್ರಶ್ನೆ:** ಅಪೊಸ್ತಲರು ಹೊಂದಿದಂತ "ಒಂದೇ ವಿಧವಾದ ವರಗಳನ್ನು" ಕೊರ್ನೇಲ್ಯನು ಮತ್ತು ಅವನ ಸ್ನೇಹಿತರು ಹೊಂದಿದಾಗ, ಅವರ ಶಕ್ತಿಯನ್ನೆ ಇವರು ಹೊಂದಿದ್ದರೇ? ಅಪೊಸ್ತಲರ ಕೃತ್ಯ 9ರಲ್ಲಿ ಪೇತ್ರನು ಸತ್ತವರನ್ನು ಎಬ್ಬಿಸಿದಂತೆ ಮಾಡಲು ಸಾಧ್ಯವಿತ್ತೆ? ಅಪೊಸ್ತಲರಂತೆ ಇತರರ ಮೇಲೆ ಕೈ ಇಡುವದರ ಮೂಲಕ ಇತರರು ಮಹತ್ಕಾರ್ಯದ ಶಕ್ತಿಯನ್ನು ಪಡೆಯಲು ಸಾಧ್ಯವಿತ್ತೇ (ಅಪೊಸ್ತಲರ ಕೃತ್ಯಗಳು 8:18)?

**ಉತ್ತರ:** ಲೂಕನು ಅದನ್ನು ಹೇಳಿರುವದಿಲ್ಲ. ಕೊರ್ನೇಲಿಯನ ಚರಿತ್ರೆಯ ಬಗ್ಗೆ ನನಗೆ ಹೆಚ್ಚು ತಿಳಿದಿರಬೇಕಿತ್ತು ಎಂಬುದು ನಮ್ಮ ಆಶೆ, ನಾವು ಅದನ್ನು ಹೊಂದಿರಬೇಕು ಎಂದು ಪರಿಶುದ್ಧಾತ್ಮನು ಬಯಸಿರಲಿಲ್ಲ. ಅಪೊಸ್ತಲರಾಗಿದ್ದರಿಂದ ಅವರಲ್ಲಿ ಬಹಳಷ್ಟು ಶಕ್ತಿ ಇತ್ತು, ಅವರು ಆತ್ಮನ ಸ್ಥಾನವನ್ನು ಹೊಂದಿದರ ನಿಮಿತ್ತವಲ್ಲ. ಒಂದು ವೇಳೆ ಅದು ಸತ್ಯವಾಗಿದ್ದರೆ, ಕೊರ್ನೇಲ್ಯನು ಮತ್ತು ಅವನ ಸ್ನೇಹಿತರು ಅವರಲ್ಲಿದ್ದ ಶಕ್ತಿಯನ್ನು ಹೊಂದಿರಲು ಸಾಧ್ಯವಿಲ್ಲ. ನಿಶ್ಚಯವಾಗಿಯೂ ಅವರು ಬೇರೆ ವಿಧವಾದ ಶಕ್ತಿಯನ್ನು ಹೊಂದಿದ್ದರು. ಇತರೆ ವರದಾನಗಳ ಸಂಗಡ, ಒಂದು ಅಥವಾ ಹೆಚ್ಚಿನವರು ಪ್ರವಾದನೆಯ ವರವನ್ನು ಹೊಂದಿರಬಹುದು, ಇದರ ಮೂಲಕ ದೇವರ ಚಿತ್ತವನ್ನು ಅರಿತು, ಪೇತ್ರನು ತೆರಳಿದ ನಂತರ, ಅವನ ಸೇವೆಯನ್ನು ಈ ವರದ ಮೂಲಕ ಮುಂದುವರಿಸಿರಬಹುದು.

**ಪ್ರಶ್ನೆ:** ಕೊರ್ನೇಲ್ಯನ ಹಾಗೂ ಅವನ ಸ್ನೇಹಿತರ ದೀಕ್ಷಾಸ್ನಾನವು, "ಶಿಶು ದಿಕ್ಷಾಸ್ನಾನವನ್ನು" ರುಜುವಾತು ಪಡಿಸುವುದೇ? ಅದು ವಾಕ್ಯಕ್ಕೆ ಅನುಗುಣವಾಗಿದೆಯೇ?

**ಉತ್ತರ:** ಇಲ್ಲ. ಕೊರ್ನೇಲ್ಯನ ಮನೆಯಲ್ಲಿ ಅನೇಕ ಶಿಶುಗಳ ಇದ್ದವೇ ಎಂಬುದು ಕೆಲವರ ಅಭಿಪ್ರಾಯ. ಮತ್ತು ಅವರಿಗೂ ದೀಕ್ಷಾಸ್ನಾನವಾಯಿತು ಎಂಬುದು ಮತ್ತೊಂದು ಅಭಿಪ್ರಾಯ. ಹೇಗೂ ಅವನ ಮನೆಯಲ್ಲಿ ದೀಕ್ಷಾಸ್ನಾನ ಮಾಡಿಸಿ ಕೊಂಡವರೆಲ್ಲರೂ, ಮೊದಲು ದೇವರ ವಾಕ್ಯವನ್ನು ಕೇಳಿದರು (10:33; 15:7). ಯೇಸುವಿನಲ್ಲಿ ನಂಬಿಕೆ ಇಟ್ಟರ (10:43, 5:7, 9) ನಂತರ ಮಾನಸಾಂತರ ಪಟ್ಟರು (11:18). ಶಿಶುಗಳು ಈ ಬೇಡಿಕೆಗಳನ್ನು ಈಡೇರಿ ಸಲಾರರು.

# ದೆವ್ವಗಳು: ಕೆಟ್ಟ ಆತ್ಮಗಳು

ಯೇಸು ಕ್ರಿಸ್ತನು ತನ್ನ ವೈಯಕ್ತಿಕವಾದ ಸೇವೆಯನ್ನು ಪ್ರಾರಂಭಿಸಿದಾಗ "ಸುವಾರ್ತೆಯನ್ನು ಸಾರುತ್ತಾ ದೆವ್ವಗಳನ್ನು ಬಿಡುಸುತ್ತಾ" ದೇಶಗಳನ್ನೆಲ್ಲಾ ಸಂಚರಿಸಿದನು (ಮಾರ್ಕ 1:39). ಹಾಗೆಯೇ ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಒಂದು ಚಿಕ್ಕ ನಿಯೋಗದೊಂದಿಗೆ ಕಳುಹಿಸುವಾಗ ಅವರಿಗೆ ಎಲ್ಲಾ ದೆವ್ವಗಳನ್ನು ಬಿಡಿಸುವ ಮತ್ತು ರೋಗಗಳನ್ನು ವಾಸಿಮಾಡುವ "ಶಕ್ತಿಯನ್ನೂ ಅಧಿಕಾರವನ್ನೂ ಶಕ್ತಿಯನ್ನೂ" ಕೊಟ್ಟನು (ಲೂಕ 9:1).

ದಿವಾರೋಹಣಕ್ಕಿಂತಲೂ ಮುಂಚೆ ಆತನು ಅಪೊಸ್ತಲರು "ದೆವ್ವಗಳನ್ನು ಬಿಡಿಸಲು" ಶಕ್ತರಾಗುತ್ತಾರೆ ಎಂದು ವಾಗ್ದನವನ್ನು ಮಾಡಿದನು (ಮಾರ್ಕ 16:17), ಅಪೊಸ್ತಲರ ಕೃತ್ಯದಲ್ಲಿ ಅಪೊಸ್ತಲರು ಅನೇಕ ಅಶುದ್ಧ ಆತ್ಮಗಳನ್ನು ಬಿಡಿಸಿದಿದುದರ ಬಗೆಗೆ ಅನೇಕ ವಿವರಣೆಗಳಿವೆ (ಅಪೊಸ್ತಲರ ಕೃತ್ಯಗಳು 5:16; 8:7; 16:16-18; 19:11, 12).

ಉದಾರವಾದಿ ಪಂಡಿತರು ದೆವ್ವಗಳ ಅಸ್ತಿತ್ವವನ್ನು ನಿರಾಕರಿಸುತ್ತಾರೆ, ದೈಹಿಕ ಅಸ್ವಸ್ಥತೆಗೆ ಕೆಟ್ಟ ಆತ್ಮಗಳೇ ಕಾರಣ ಎಂದು ಆರೋಪಿಸುವದು ಜನರ ಮೂಢನಂಬಿಕೆಗಳು ಎಂದು ಹೇಳುತ್ತಾರೆ. ಪ್ರೇರೇಪಿಸಲ್ಪಟ್ಟಂತಹ ವೈದ್ಯನಾದ ಲೂಕನು ಹೇಗೋ, ದೈಹಿಕ ಅಸ್ವಸ್ಥತೆ ಹೊಂದಿದವರನ್ನು ಹಾಗೂ "ಅಶುದ್ಧ ಆತ್ಮಗಳಿಂದ ಉಪದ್ರವಕ್ಕೀಡಾದವರು" ಅಥವಾ ದೆವ್ವ ಪೀಡಿತರನ್ನು ಪ್ರತ್ಯೇಕಿಸಿದ್ದಾನೆ.

"ದೆವ್ವ" ಗ್ರೀಕ ಪದವಾದ "*ಡಯಾಮೋನಿಯನ್*"ನಿಂದ ಭಾಷಾಂತರವಾಗಿದೆ. (KJVಯು ದೆವ್ವಗಳಿಗೆ *"ಡಯಮೋನಿಯನ್"* ಎಂಬಂತೆ ಬಹುವಚನದಲ್ಲಿ ಭಾಷಾಂತರವಾಗಿದ್ದು, ಇದು ಅಲ್ಲಿ ಒಂದೇ ಒಂದು ದೆವ್ವವನ್ನು [*ಡಯಾಬೋಲ್*] ಸೂಚಿಸುವುದರಿಂದ ಈ ವಿವರಣೆಯು ಗಲಿಬಿಲಿಗೊಳಿಸುವಂತದ್ದಾಗಿದೆ.) ದೆವ್ವಗಳು "ಅಶುದ್ಧ ಆತ್ಮಗಳು" ಅಥವಾ "ಕೆಟ್ಟ ಆತ್ಮಗಳು" ಎಂದು ಕರೆಯಲ್ಪಟ್ಟಿವೆ. ದೆವ್ವಗಳ ಬಗೆಗೆ ನಾವು ಸತ್ಯವೇದೀಯವಾಗಿ ಅತಿ ಸ್ವಲ್ಪವಾದ ಮಾಹಿತಿಯನ್ನು ಹೊಂದಿದ್ದೇವೆ, ಆದರೆ ಅಲ್ಲಿ ಊಹಾಪೋಹಗಳಿಗೆ ಯಾವ ಕೊರತೆಯ ಇಲ್ಲ (ಹೆಚ್ಚಾಗಿ ಇದು ಅನ್ಯರಸಂಪ್ರದಾಯಗಳ ಮೇಲೆ ಆಧಾರಿತವಾಗಿದೆ). ಕೆಲವರು ಯೋಚಿಸುವುದೇನೆಂದರೆ ದೆವ್ವಗಳು ಸತ್ತ ಮನುಷ್ಯನ ಆತ್ಮಗಳಾಗಿವೆ (ಇದು ಲೂಕನ ಬೋಧನೆಯ 16 ಅಧ್ಯಾಯದಲ್ಲಿ ತೀರಿಹೋದಂತಹ ಐಶ್ವರ್ಯವಂತನಿಗೆ ಭೂಮಿಯಲ್ಲಿರುವ ಯಾರೊಬ್ಬರನ್ನೂ ಸಂಪರ್ಕಿಸಲಾಗಲಿಲ್ಲ ಎಂಬುದಾಗಿದ್ದು ಮೇಲಿನ ವಿಚಾರಕ್ಕೆ ಅಸಮಂಜಸವಾಗಿದೆ). ಇನ್ನೂ ಕೆಲವರು, ಅವರು ದೊಬ್ಬಲ್ಪಟ್ಟ ದೇವದೂತರಾಗಿದ್ದು ಬಂಡಾಯದಿಂದ್ದೆದ ಸೈತಾನನ ಅನುಯಾಯಿಗಳು ಎಂದು ಯೋಚಿಸುವವರಾಗಿದ್ದಾರೆ. ಅವುಗಳ ಅಸ್ತಿತ್ವದ ಬಗೆಗೆ ನಮಗೆ ಅರಿವಿದ್ದರೆ ಸಾಕು ಎಂದು ದೇವರು ಬಯಸುವವನಾಗಿದ್ದಾನೆ.

ಮತ್ತಾಯ 12:22-29ರಲ್ಲಿ ಸೈತಾನನು "ದೆವ್ವಗಳ ಒಡೆಯನು" ಎಂಬುವಂತೆ ಸೂಚಿತನಾಗಿದ್ದಾನೆ. ಸೈತಾನನೊಂದಿಗೆ ಕಾರ್ಯಮಾಡುವದು ಎಂದರೆ ದೆವ್ವಗಳು ಮಾನವನನ್ನು ಹಾದಿತಪ್ಪಿಸುವತ್ತ ನಡೆಸುವ ಪ್ರಯತ್ನವೇ ಆಗಿದೆ. ಹೀಗೆ ಮೂರ್ತಿ ಪೂಜೆಯು ದೆವ್ವಗಳ ಪೂಜೆ ಎಂದು ಕರೆಯಲ್ಪಡುತ್ತದೆ (1 ಕೊರಿಂಥ 10:20; ಪ್ರಕಟಣೆ 9:20), ಮತ್ತು ಸುಳ್ಳು ಬೋಧನೆಗಳು ದೆವ್ವಗಳ ಬೋಧನೆ ಎಂದು ಕರೆಯಲ್ಪಡುತ್ತವೆ (1 ತಿಮೊಥೆ 4:1). ಪೌಲನು ವರ್ಣಿಸಿದಂತೆ ದೆವ್ವಗಳು ಆತ್ಮೀಕ ವೈರಿಗಳ ಒಂದು ಭಾಗವಾಗಿದೆ (ಬಹುಶಃ ದೊಡ್ಡ ಭಾಗವಾಗಿವೆ): "ನಾವು ಹೋರಾಡುವವದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ" (ಎಫೆಸ 6:12). ಅಂತ್ಯದಲ್ಲಿ, ದೆವ್ವಗಳು ದೆವ್ವದೊಂದಿಗೆ ಮತ್ತು ಆತನನ್ನು

ಅನುಸರಿಸುವವನೊಂದಿಗೆ ನರಕದಲ್ಲಿ ದೊಬ್ಬಲ್ಪಡುತ್ತವೆ (ಪ್ರಕಟಣೆ 20:10, 15).

ದೆವ್ವಗಳ ಪೀಡನೆಯು (ಒಂದು ಅಥವಾ ಹೆಚ್ಚು ದೆವ್ವಗಳು ಒಬ್ಬನ ಚಿತ್ತದವಿರುದ್ಧ ಆತನನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳುವದು) ಇಂತಹ ಒಂದು ಸೋಜಿಗವು ಯೇಸುವಿನ ಮತ್ತು ಅಪೊಸ್ತಲರ ಸಮಯಕ್ಕೆ ಸೀಮಿತವಾದ ಲಕ್ಷಣವಾಗಿತ್ತು. ದೇವರವಾಕ್ಯದಲ್ಲಿ ಕಾಲಕಾಲಕ್ಕೆ ಅದ್ಭುತೀಯ ಶಕ್ತಿಯ ವಿಶೇಷವಾದ ಹೊರಸೂಸುವಿಕೆಯ ಅನೇಕ ಸಂದರ್ಭಗಳು ಉದಿಸಿದವು: ಮಾನವ ಮತ್ತು ಜಗತ್ತಿನ ಸೃಷ್ಟಿ, ವಿಶೇಷ ರಾಷ್ಟ್ರದ ಸೃಷ್ಟಿ (ಮೋಶೆ ಮತ್ತು ಯೆಹೋಶುವನ ಕಾಲಗಳು), ರಾಷ್ಟ್ರದ ಪುನಃ ಸ್ಥಾಪಿಸುವಿಕೆಯ ಪ್ರಯತ್ನ (ಎಲಿಯ ಮತ್ತು ಎಲೀಷರ ಕಾಲ), ಮತ್ತು ದೇವರ ಹೊಸಜನಾಂಗದ ಸೃಷ್ಟಿ (ಯೇಸು ಕ್ರಿಸ್ತನ ಮತ್ತು ಅಪೊಸ್ತಲರ ಕಾಲ). ದೇವರು ತನ್ನ ಹಿಂಬಾಲಕರಿಗೆ (ಮಕ್ಕಳು) ಮಿತಿಮೀರಿದ ಅದ್ಭುತೀಯ ಶಕ್ತಿಯನ್ನು ದಯಪಾಲಿಸಿದಾಗಲೆಲ್ಲಾ, ದೆವ್ವ ಮತ್ತು ಆತನ ಹಿಂಬಾಲಕರಿಗೆ ಮಿತಿಯುಳ್ಳ ಅದ್ಭುತೀಯ ಶಕ್ತಿಯನ್ನು ಕೊಡುತ್ತಾನೆ (ಹಳೆಯ ಒಡಂಬಡಿಕೆಯ ಉದಾಹರಣೆಯ ಮೋಶೆ ಮತ್ತು ಫರೋಹನ ಮಾಂತ್ರಿಕರ ಕಥೆಯನ್ನು ನೋಡಿರಿ ([ವಿಮೋಚನಕಾಂಡ 7:10-12, 20, 22; 8:6, 7, 17-19].) ವಿಶೇಷ ಸಂದರ್ಭಗಳು ಮುಗಿದುಹೋದಾಗ ದೇವರ ಹಿಂಬಾಲಕರಿಗಷ್ಟೇ (ಮಕ್ಕಳಿಗಷ್ಟೇ) ಅಲ್ಲ ಆದರೆ ದೆವ್ವಗಳು ಆತನ ಸಹಯೋಗಿಗಳಿಗೂ ಸಹ ಅದ್ಭುತಗಳನ್ನು ಪ್ರದರ್ಶಿಸುವ ಸಾಮರ್ಥ್ಯವು ತೆಗೆದುಹಾಕಲ್ಪಡುತ್ತದೆ.

ಹೊಸ ಒಡಂಬಡಿಕೆಯ ಮೂಲಕ ಸಾಗುತ್ತಿದ್ದಂತೆ, ಸೈತಾನ ಮತ್ತು ಆತನ ಸೇನೆಯ ಪ್ರಭಾವದ ಬಗೆಗೆ ನಿರಂತರವಾಗಿ ಎಚ್ಚರಿಸಲ್ಪಡುತ್ತಿರುವಂತೆ ನಾವು, ಒಬ್ಬನು ತನ್ನ ಚಿತ್ತದ ವಿರುದ್ಧ ಸೈತಾನ ಅಥವಾ ದೆವ್ವಗಳ ಪೀಡನೆಗೆ ಒಳಗಾಗಿರುವವರ ಬಗೆಗೆ ಕಡಿಮೆ ಮತ್ತು ಅತಿ ಕಡಿಮೆ ಬಾರಿ ಓದುತ್ತೇವೆ. ಕ್ರೈಸ್ತರಿಗೆ ಬರೆದ ಪತ್ರಿಕೆಗಳಲ್ಲಿ, ದೆವ್ವಗಳ ಪೀಡನೆಯ ಬಗೆಗೆ ಎಲ್ಲಿಯೂ ಹೇಳಲ್ಪಟ್ಟಿಲ್ಲ. ಮತ್ತು ಯಾಕೋಬನೂ ಕೂಡಾ “ಸೈತಾನನನ್ನು ಎದುರಿಸಿರಿ ಮತ್ತು ಆತನು ನಿಮ್ಮನ್ನು ಬಿಟ್ಟು ಓಡಿಹೋಗುವನು” (ಯಾಕೋಬ 4:7) ಎಂದು ಹೇಳಿದ್ದಾನೆ. ಇದರ ಅರ್ಥ ಸೈತಾನನು ಮತ್ತು ಆತನ ದೆವ್ವಗಳು ಕ್ರಿಯಾತ್ಮಕವಾಗಿರುವುದಿಲ್ಲ ಎಂದಲ್ಲ. ಇದರ ಅರ್ಥವು ದೆವ್ವಗಳು ಯಾರೊಬ್ಬನನ್ನು ಬಹುಕಾಲದವರೆಗೆ ಪೀಡಸಲಾರವು ಮತ್ತು ಆತನ ಚಿತ್ತದ ವಿರುದ್ಧ ಕಾರ್ಯವನ್ನು ಮಾಡುವವು ಎಂದಾಗಿದೆ. ಸೈತಾನ ಅಥವಾ ಆತನ ದೆವ್ವಗಳು ನಿನ್ನ ಜೀವಿತದಲ್ಲಿ ಅಥವಾ ನಿನ್ನಲ್ಲಿ ಪ್ರಭಾವವನ್ನು ಹೊಂದಿದ್ದಾದರೆ, ಅದು ಯಾಕೆ ಎಂದರೆ ನಾವು ಪ್ರಭಾವವನ್ನು ಬೀರಲು ಅವಕಾಶವನ್ನು ಕೊಟ್ಟಿದ್ದೇ ಇದಕ್ಕೆ ಕಾರಣವಾಗಿದೆ. ಹೊಸ ಒಡಂಬಡಿಕೆಯ ಸಮಯದಲ್ಲಿ ಅಸ್ತಿತ್ವದಲ್ಲಿ ಇದ್ದಂತಹ ದೆವ್ವಗಳ ಒಡೆತನವನ್ನು ನಾವು ಈ ದಿನಗಳಲ್ಲಿ ಹೊಂದಿಲ್ಲ.

# ಪದಗಳ ಪಟ್ಟಿ: ಭಾಗ ಎರಡು

**ದೇವದೂಷಣೆ** (*blasphemia*) - "ಬಾಲ್ಸ್ಫೆಮಿ" ಇದರ ಅಕ್ಷರಸಹ ಅರ್ಥವು "ಆತಕಾರಿ ಭಾಷಣ" ಎಂದಾಗಿದೆ. ಹೊಸ ಒಡಂಬಡಿಕೆಯಲ್ಲಿ ಇದು ವಿಶೇಷವಾಗಿ ದೇವರನ್ನು, ಕ್ರಿಸ್ತನನ್ನು ಅಥವಾ ಪರಿಶುದ್ಧಾತ್ಮನನ್ನು ನಿಂಧಿಸುವುವಂತಹ ಮಾತುಗಳನ್ನು ಸೂಚಿಸುವುದಕ್ಕಾಗಿ ಹೆಚ್ಚಾಗಿ ಬಳಸುವುದಾಗಿದೆ. ದಿವ್ಯ ಸಂಗತಿಗಳ ಬಗ್ಗೆ ದೇವದೂಷಣೆಯ ಮಾತುಗಳನ್ನಾಡುವುದು (ಲಘುವಾಗಿ, ಮಾತನಾಡುವದು) ಇದರ ಒಂದು ಪ್ರಾಯೋಗಿಕ ವಿವರಣೆಯಾಗಿದೆ. ಯೇಸುವು ದೇವರ ಮಗನೆಂದು (ದಿವ್ಯವಾದ) ಹೇಳಿದಾಗ, ಇದು ಅಪನಂಬಿಗಸ್ತರಾದ ಯೆಹೂದಿಗಳಿಂದ ದೇವದೂಷಣೆ ಎಂದು ಪರಿಗಣಿಸಲ್ಪಟ್ಟಿತು (ಯೋಹಾನ 10:33; ಮತ್ತಾಯ 26:65). ದೇವದೂಷಣೆ ಮಾಡಿದವರು ಮರಣದ ಶಿಕ್ಷೆಗೆ ಒಳಗಾಗುತ್ತಿದ್ದರು.

**ಡೀಕನ** (*diakonos*) - "ಡೀಕನ್" ಪದದ ಅಕ್ಷರ ಸಹ ಅರ್ಥ "ಸೇವಕ" ಅಥವಾ "ಸ್ವಯಂಸೇವಕ" ಎಂದಾಗಿದೆ. ಸಾಮಾನ್ಯವಾಗಿ ಹೊಸ ಒಡಂಬಡಿಕೆಯಲ್ಲಿ ಸೇವೆ ಮಾಡುವವರನ್ನು ಸೂಚಿಸಲು ನಾಮಪದ ಮತ್ತು ಕ್ರಿಯಾಪದರೂಪದಲ್ಲಿ ಈ ಪದಗಳು ಬಳಸಲಟ್ಟಿವೆ: ಮಾರ್ಥಳು (ಲೂಕ 10:40), ಮಾರ್ಕ (2 ತಿಮೊಥೆ 4:11), ದೇವದೂತರು (ಇಬ್ರಿಯ 1:14), ಮತ್ತು ಬೋಧಕರು (2 ತಿಮೊಥೆ 4:5). ಕೆಲ ಸಾರಿ ಸಭೆಯಲ್ಲಿನ "ಡಿಕನ್‌ರ" ಸ್ಥಾನವನ್ನು (ಕೆಲಸವನ್ನು) ಹೊಂದಿರುವವರನ್ನು ವಿಶೇಷಾರ್ಥದಲ್ಲಿ ಸೂಚಿಸಲು ಈ ಪದವು ಬಳಕೆಯಾಗುತ್ತದೆ. ಈ ಸ್ಥಾನಕ್ಕಾಗಿನ ಅರ್ಹತೆಗಳು 1 ತಿಮೊಥೆ 3:8-13ರಲ್ಲಿ ಕೊಡಲ್ಪಟ್ಟಿವೆ. ಈ ಹುದ್ದೆಗಳು ಸೂಚಿಸುವಂತೆ, ಡೀಕನ್‌ರ ಕಾರ್ಯವು ಸೇವೆ ಮಾಡುವುದಕ್ಕೆ ಹೊರತು, ನಾಯಕರಂತೆ ನಡೆಸುವುದಕ್ಕಲ್ಲ. ಹೊಸ ಒಡಂಬಡಿಕೆಯಲ್ಲಿ ಹಿರಿಯರು ಸಭೆಯನ್ನು ನೋಡಿಕೊಳ್ಳಬೇಕು ಮತ್ತು ಡೀಕನ್ನರು ಅವರ ಅಡಿಯಲ್ಲಿ ಕಾರ್ಯಮಾಡಬೇಕು ಎಂದಿದೆ (ಪದಕೋಶದಲ್ಲಿ ನೋಡಿರಿ "ಹಿರಿಯರು").

**ಶಿಷ್ಯರು** (*mathetes*) - ಗ್ರೀಕ್‌ಪದದಲ್ಲಿ "ಶಿಷ್ಯರು" ಎಂಬುದರ ಅಕ್ಷರ ಸಹ ಅರ್ಥವು "ಕಲಿಯುವವ" ಎಂದು. ಹೊಸ ಒಡಂಬಡಿಕೆಯ ಸಮಯದಿಂದ, ವಿದ್ಯಾರ್ಥಿಯೋರ್ವನು ಸ್ಥಳದಿಂದ ಸ್ಥಳಕ್ಕೆ ಆತನ ಬೋಧನೆಗಳನ್ನು ಕೇಳುತ್ತಾ, ಸಾದಾ ತನ್ನ ಶಿಕ್ಷಕನನ್ನು ಹಿಂಬಾಲಿಸುತ್ತಾ, ಆತನ ವಿಚಾರಗಳನ್ನು "ಹಿಂಬಾಲಕನು" ತನ್ನೊಡನೆ ತೆಗೆದುಕೊಂಡು ಹೋಗುತ್ತಿದ್ದನು ಮತ್ತು "ಅನುಕರಣೆಯನ್ನು" ಸಹ ಮಾಡುತ್ತಿದ್ದನು.

**ದೇವರ ಭಯ** - ಹೊಸ ಒಡಂಬಡಿಕೆಯಲ್ಲಿ, "ದೇವರಿಗೆ ಭಯಪಡುವವನು" ಎಂಬ ಪಾರಿಭಾಷಿಕವು ಕೆಲಸಾರಿ ಯೆಹೂದಿಗಳನ್ನು, ಕೆಲಸಾರಿ ಕ್ರೈಸ್ತರನ್ನು ಸೂಚಿಸುವುದಾಗಿದೆ. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಅನೇಕ ಸಾರಿ, ಇದು ವಿಶೇಷಾರ್ಥದಲ್ಲಿ ಸನೆಗೊಗ್‌ನ (ಸಭಾಮಂದಿರದ) ಬಳಸಲ್ಪಟ್ಟಿದ್ದು: "ದೇವರಿಗೆ ಭಯಪಡುವ" ಅನ್ಯನಾದವನೊಬ್ಬನು ನಿಜದೇವರಲ್ಲಿ ನಂಬಿಕೆಯಿಡುವವನೂ ಮತ್ತು ಸಿಗೆಗಾಗನ ಆರಾಧನೆಯಲ್ಲಿ ಪಾಲ್ಗೊಳ್ಳುವವನು ಆಗಿದ್ದು, ಆದರೆ ಯೆಹೂದಿ ನಂಬುಗೆಗಳಿಗೆ ಪರಧರ್ಮಿಯನು ಮಾರುಹೋಗುತ್ತಿರಲಿಲ್ಲ (ಅಪೊಸ್ತಲರ ಕೃತ್ಯಗಳು ಪುಸ್ತಕ 1ರಲ್ಲಿನ Proselyte "ಪರಧರ್ಮಿಯನ್ನು" ನೋಡಿರಿ).

**ಸಮಾರ್ಯದವರು** - ಸಮಾರ್ಯದವರ ಜನಾಂಗವು ಅಶೇರಿಯನ್ನರ ಗುಲಾಮತನದ ಫಲಿತಾಂಶವೇ ಆಗಿದೆ. ಕ್ರಿ.ಪೂ. 722ರಲ್ಲಿ ಅಶೇರಿಯನ್ನರು ಸಾವಿರಾರು ಯೆಹೂದಿಗಳನ್ನು ಉತ್ತರ ಕಾನಾನದಿಂದ ಗುಲಾಮರನ್ನಾಗಿಸಿ ಕರೆತಂದರು - ಆದರೆ ಕೆಲವರು ಅಲ್ಲಿಯೇ ಉಳಿದರು. ಅಶೇರಿಯದ ಆಡಳಿತಗಾರರು ಬೆಬಿಲೋನ, ಹಾಮತ್, ಮತ್ತು ಅರೇಬಿಯಾಗಳಿಂದ ವಲಸೆ ಹೋದವರನ್ನು ಈ ಪ್ರದೇಶಗಳನ್ನು ತುಂಬಿಸಲು ಕಳುಹಿಸಿದರು (2 ಅರಸು 17:24-26; ಎಜ್ರ 4:2), ಮತ್ತು ಈ ವಸಾಹತುಗಾರರು ಯೆಹೂದಿಗಳೊಂದಿಗೆ ಮದುವೆಯಾದರು.

ಇದರ ಪರಿಣಾಮವಾಗಿ ಉದಿಸಿದ ಜನಾಂಗವೇ ಸಮಾರ್ಯದವರು - ಯೆಹೂದಿಗಳ ಭಾಗ ಅನ್ಯ ಜನರ ಭಾಗ, ಕ್ರಿ.ಪೂ. 538ರಲ್ಲಿ ಯೆಹೂದಿಗಳನ್ನು ಬೆಬಿಲೋನಿಯಾದಿಂದ ತಿರುಗಿ ಪಾಲಿಸ್ಟೈನಿಯಕ್ಕೆ ಗುಲಾಮರನ್ನಾಗಿಸಿ ತೆಗೆದುಕೊಂಡು ಹೋದಾಗ, ಅವರು ತಮ್ಮ ಜನಾಂಗೀಯ ಶುದ್ಧತೆ ತಿರುಗಿಪಡೆದುದಕ್ಕೆ ಹೆಮ್ಮೆಪಟ್ಟರು ಮತ್ತು ಸಮಾರ್ಯದವರನ್ನು ಕೀಳಾಗಿ ನೋಡಿ ಕೊಂಡರು. ಸಮಾರ್ಯದವರು ಯೆಹೂದಿಗಳ ಪುನಃ ನಿರ್ಮಾಣಕ್ಕಾಗಿ ಸಹಾಯಹಸ್ತ ಚಾಚಿದರೂ, ಯೆಹೂದಿಗಳು ಅವರ ಸಹಾಯವನ್ನು ನಿರಾಕರಿಸಿದರು. ಸಮಾರ್ಯದವರು ಆರಾಧನೆಗಾಗಿ ಗೆರಜ್ಜೀಮ್ ಬೆಟ್ಟವನ್ನು ತಮ್ಮ ಆರಾಧನೆಯ ಸ್ಥಳವಾಗಿ ಆರಿಸಿಕೊಂಡರು (ಯೋಹಾನ 4:20). ಸಮಾರ್ಯದವರು ಹಳೆಯ ಒಡಂಬಡಿಕೆಯ ಮೊದಲ ಐದು ಪುಸ್ತಕಗಳನ್ನು ಮಾತ್ರ ತಮ್ಮ ವೇದಭಾಗವಾಗಿ ಒಪ್ಪಿಕೊಂಡಿದ್ದರು - ಯೆರೂಸಲೇಮು ಆರಾಧನಾ ಸ್ಥಳವಾಗಿ ಸೂಚಿಸಲ್ಪಟ್ಟಿರಲಿಲ್ಲ.

**ನ್ಯಾಯಶಾಸ್ತ್ರಿಗಳು** (*grammateus*) - ಗ್ರಿಕ್ ಪದದ "ನ್ಯಾಯಶಾಸ್ತ್ರಿಗಳು" ಇದರ ಅಕ್ಷರ ಸಹ ಅರ್ಥವು "ಶಾಸ್ತ್ರಿಗಳು" ಎಂದು. ಹಳೆಯ ಒಡಂಬಡಿಕೆಯಲ್ಲಿ ಸಾಮಾನ್ಯವಾಗಿ ಪ್ರಮುಖ ಘಟನೆಗಳನ್ನು ದಾಖಲಿಸುವ ವೈಯಕ್ತಿಕ ಜವಾಬ್ದಾರಿಗಳನ್ನು (ಅರಸನ ಮಾತುಗಳನ್ನು ಒಳಗೊಂಡಿತು) ಇದು ಸೂಚಿಸುವಂತದ್ದಾಗಿತ್ತು. ಹೊಸ ಒಡಂಬಡಿಕೆಯಲ್ಲಿ ಧಾರ್ಮಿಕ ನಾಯಕರುಗಳ ಗುಂಪನ್ನು ಸೂಚಿಸಲು ಬಳಸಲಾಗಿತ್ತು (ಯೆಹೂದಿ ಸಂಪ್ರದಾಯದ ಪ್ರಕಾರ ಎಜ್ರನಿಂದ ಪ್ರಾರಂಭ ವಾದ [ಎಜ್ರ 7:6]. ಯಾಕೆಂದರೆ ನ್ಯಾಯಶಾಸ್ತ್ರಿಗಳ ಒಂದು ಪ್ರಮುಖ ಕೆಲಸವೆಂದರೆ ಹಳೆಯ ಒಡಂಬಡಿಕೆಯ ದೇವವಾಕ್ಯವನ್ನು ನಕಲು ಮಾಡುವದು ಆಗಿದ್ದು, ಅದರಲ್ಲಿ ತಾವು ತಮ್ಮನ್ನು ಪರಿಣಿತರು ಎಂದು ಪರಿಗಣಿಸಿಕೊಳ್ಳುತ್ತಿದ್ದರು. ಅನೇಕ ನ್ಯಾಯಶಾಸ್ತ್ರಿಗಳು ಫರಿಸಾಯರು ಆಗಿದ್ದರು.

**ಸಭಾಮಂದಿರ** (*sunagoge*) - ಸಿನೆಗಾಗ್ ಈ ಪದವು ಒಂದು ಸಂಯುಕ್ತಪದ ವಾಗಿದ್ದು "ಜೊತೆ" ಎಂಬುದರ ಉಪಸರ್ಗದ ಜೋಡನೆಯಾಗಿದ್ದು, ನಾಯಕತ್ವ ವಹಿಸು ಎಂಬ ಪದದ ಜೊತೆ ಇರುವುದಾಗಿದೆ. ಇದರ ಅಕ್ಷರ ಸಹ ಅರ್ಥವು "ಜೊತೆಯಾಗಿ ಕೂಡಿಬರುವುದಕ್ಕೆ ನಡೆಸಲ್ಪಟ್ಟವರು" ಎಂದು ಆಗಿದೆ. ಮೂಲ ಅರ್ಥದಲ್ಲಿ, ಇದು "ಏಕಲಸ್ಯ" ಎಂಬುದಕ್ಕೆ ಸಮಾನವಾಗಿದೆ ಮತ್ತು ಕ್ರೈಸ್ತ ಸಭೆಯನ್ನು ಸೂಚಿಸಲು ಒಂದೊಂದು ಸಾರಿ ಬಳಸುವಂತದ್ದಾಗಿದೆ (ಯಾಕೋಬ 2:2ರಲ್ಲಿ "ಸಭೆ ಎಂಬುದು ಸಿನೆಗಾಗ ಎಂದು ಭಾಷಾಂತರವಾಗಿದೆ). ಹೊಸ ಒಡಂಬಡಿಕೆಯಲ್ಲಿ, ಈ ಪದವು ಸಾಮಾನ್ಯವಾಗಿ ಯೆಹೂದಿ ಪ್ರಾರ್ಥನೆಯ ಸ್ಥಳವನ್ನು ಮತ್ತು/ಅಥವಾ ಯೆಹೂದಿಗಳ ಪ್ರಾರ್ಥನಾ ಸಭೆಯನ್ನು ಸೂಚಿಸಲು ಬಳಸುವಂತದ್ದಾಗಿದೆ. ಸಂಪ್ರದಾಯದ ಪ್ರಕಾರ, ಸಿನೆಗಾಗ್ ಇದು ಮೂಲತಃ ವಾಗಿ ಬೆಬಿಲೋನಿಗೆ ಸೆರೆಹೋದ ಯೆಹೂದಿಗಳು ಆರಾಧನೆಗೆಂದು ದೇವಾಲಯಕ್ಕೆ ಹೋಗ ದಾದ ಸಂದರ್ಭದಲ್ಲಿ ಆರಂಭವಾಯಿತು. ಯೆಹೂದಿಗಳು ಸಿನೆಗಾಗನ್ನು ದೇವಾಲಯವನ್ನು ನಿರ್ಮಿಸಿದಂತೆ ಜತನವಾಗಿ ಕಟ್ಟುವ ಯೋಚನೆಯನ್ನು ಹೊಂದಿರಲಿಲ್ಲ, ಮತ್ತು ಸಿನೆಗಾಗದ ಆರಾಧನೆಯನ್ನು ದೇವಾಲಯದ ಆರಾಧನೆಗೆ ಹೋಲಿಸಿದಾಗ ಇದು ಔಪಚಾರಿಕವಾಗಿತ್ತು (ಲೂಕ 6 ಮತ್ತು ಅಪೊಸ್ತಲರ ಕೃತ್ಯಗಳು 13 ಇವುಗಳು ಸಿನೆಗಾಗ ಸಭಾಮಂದಿರದ ಆರಾಧನೆ ವಿವರವಾದ ವಿವರಣೆಯನ್ನು ಕೊಡುತ್ತದೆ). ಸಭಾಮಂದಿರದ ನಾಯಕರುಗಳು ಸಮಾನ್ಯವಾಗಿ "ಹಿರಿಯರು" ಎಂದು ಕರೆಯಲ್ಪಡುತ್ತಿದ್ದರು. ಇದಕ್ಕೆ ಜೊತೆಯಾದ ಆರಾ ಧನಾ ಕ್ರಮವು, ಸಭಾಮಂದಿರದ ಕಟ್ಟಡವು ಯೆಹೂದಿ ಯುವಕರಿಗೆ ವರ್ಗ ಕೋಣೆಯಾಗಿ ಬಳಸಲ್ಪಡುತ್ತಿತ್ತು. ಸಭಾಮಂದಿರವನ್ನು ಪ್ರಾರಂಭಿಸಲು (ಸಿನೆಗಾಗದ ಕಾರ್ಯಕ್ಕಾಗಿ ತಮ್ಮ ಸಮಯವನ್ನು ಮೀಸಲಾಗಿಟ್ಟು ಕೊಂಡಂತಹ) ಹತ್ತು ಜನ ಯೆಹೂದಿಗಳ ಅವಶ್ಯಕತೆ ಇತ್ತು.

**ದೇವಜನ**, "ಸಂತ" (*hagios*) - "ಸಂತ" ಹೊಸ ಒಡಂಬಡಿಕೆಯಲ್ಲಿ ದೇವ ಜನರಿಗಾಗಿ

ಅಥವಾ ಕ್ರೈಸ್ತರಿಗಾಗಿ ಬಳಸಿರುವ ಸಾಮಾನ್ಯವಾದ ಹೇಳಿಕೆಯಾಗಿದೆ (ಅಪೊಸ್ತಲರಕೃತ್ಯಗಳು 9:13, 32, 41; 26:10). ಅದನ್ನು ಒಬ್ಬ ವ್ಯಕ್ತಿಗೆ ಬಳಸುವಾಗ ಗ್ರೀಕ್ ಭಾಷೆಯ "ಸಂತ" ಎಂಬುದು "ಪಾಪರಹಿತನಾದ ಸಂಪೂರ್ಣನು" ಎಂಬ ತರ್ಜುಮೆಯಾಗಿರುವದಿಲ್ಲ (ಕೊರಿಂಥದ ಕ್ರೈಸ್ತರು ಪರಿಪೂರ್ಣರಲ್ಲದಿದ್ದರೂ, "ಅವರು ದೇವಜನರಾಗಿದ್ದರು" [1 ಕೊರಿಂಥ 1:2; 2 ಕೊರಿಂಥ 1:1]. "ಪ್ರತ್ಯೇಕವಾದವರು" "ಮೀಸಲಾದವರು" ಎಂಬ ಅಕ್ಷರಶಃ ಗ್ರೀಕ್ ಅರ್ಥ) ಮತ್ತು "ಪರಿಶುದ್ಧರು" ಅಥವಾ "ಶುದ್ಧಪಡಿಸಿಕೊಂಡವರೂ ಎಂಬುದಾಗಿಯೂ ಭಾಷಾಂತರಿಸಬಹುದು." ಒಂದು ಅರ್ಥದಲ್ಲಿ ನಾವು ಕ್ರೈಸ್ತರಾದಾಗ ತೊಳೆಯಲ್ಪಟ್ಟವರಾಗಿ ಕರ್ತನ ಸೇವೆಗಾಗಿ ಮೀಸಲಿಡಲ್ಪಡುತ್ತೇವೆ (2 ಥೆಲೋನಿಕ 1:10 ವಿಶ್ವಾಸಿಗಳನ್ನು "ಸಂತರೂ" ಎನ್ನುವರು). ಶುದ್ಧತೆಯು ಪ್ರಗತಿಯ ಕಾರ್ಯವಾಗಿರುತ್ತದೆ (1 ಥೆಸಲೋನಿಕ 5:23) ಅದು ನಮ್ಮ "ಪರಿಶುದ್ಧವಾದ ಕರೆಗೆ" ಸಹಾಯಿಸುತ್ತದೆ (2 ತಿಮೊಥೆ 1:9).